UNIVERSAL
LIBRARY
OU_198556
UNIVERSAL
LIBRARY

**OSMANIA UNIVERSITY LIBRARY**

Call No. K923.2 T47L Accession No. K795

Author [illegible]

Title [illegible] 1932

This book should be returned on or before the date last marked below.

ಮುದ್ರಕರು:—ಕೆ. ಜಿ. ರಾಯದುರ್ಗ

ಮುದ್ರಣಾಲಯ:—ಜಯಕರ್ನಾಟಕ ಮುದ್ರಣಾಲಯ

ಧಾರವಾಡ

ಪ್ರಕಾಶಕರು:—ದ. ರಾ. ಕುಲಕರ್ಣಿ

ಪ್ರಕಾಶ ಸ್ಥಳ:—ಧಾರವಾಡ ಮಂಗಳವಾರಪೇಟೆ ಮನಿ

ನಂ. ೧೯೩೧

# ಪ್ರಕಾಶಕರ ನಾಲ್ಕು ಮಾತುಗಳು.

೧೯೨೦ ರಲ್ಲಿ ಧಾರವಾಡದ ನಾಗರಿಕರು ಲೋಕಮಾನ್ಯರ ಸ್ಮಾರಕವನ್ನು ಮಾಡಬೇಕೆಂದು ನಿಶ್ಚಯಿಸಿದರು. ಆ ಕಾರ್ಯಕ್ಕಾಗಿ ಶ್ರೀ. ಚಿಂತಾಮಣಿ ರಾಮಚಂದ್ರ ಸಹಸ್ರಬುದ್ಧೆಯವರು ೫೧೯ ರೂ. ಗಳನ್ನೂ ಧಾರವಾಡದ ಟಿಳಕಸ್ಮಾರಕ ಫಂಡ ಕಮಿಟಿಯವರು ೪೧೯ ರೂಪಾಯಿಗಳನ್ನೂ ಕೂಡಿಸಿದರು. ಮುಂದೆ ಆ ಹಣದ ಮೇಲಿನ ಬಡ್ಡಿಯ ವಿನಿಯೋಗವು ಇ. ಸ. ೧೯೨೭ ರ ವರೆಗೆ ಧಾರವಾಡದ ಕರ್ನಾಟಕ ರಾಷ್ಟ್ರೀಯ ವಿದ್ಯಾಲಯಕ್ಕಾಗಿ ಮಾಡಲ್ಪಟ್ಟಿತು. ಹಣದ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ಒಂದು ಮಂಡಲವೂ ಏರ್ಪಡಿಸಲ್ಪಟ್ಟಿತ್ತು. ವಿದ್ಯಾಲಯವು ೧೯೨೭ ರಲ್ಲಿ ನಿಂತುಹೋಯಿತು. ಮೇಲ್ಕಂಡ ಮಂಡಲದ ತಾ॥ ೨೮-೭-೧೯೨೮ ರ ಸಭೆಯಲ್ಲಿ ನಿಧಿಯ ಬಡ್ಡಿಯಿಂದ ಧಾರವಾಡದಲ್ಲಿ ವಿದ್ವಾಂಸರ ಉಪನ್ಯಾಸಗಳನ್ನೂ ಏರ್ಪಡಿಸಬೇಕೆಂದು ಮತ್ತು ನಿಧಿಯ ವ್ಯವಸ್ಥೆಗಾಗಿ ಶ್ರೀ. ವಿಠ್ಠಲರಾವ ಜೋಶಿ (ಅಧ್ಯಕ್ಷರು), ಶ್ರೀ. ಗೋವಿಂದಾಚಾರ್ಯ ಗುತ್ತಲ (ಕೋಶಾಧ್ಯಕ್ಷ), ದತ್ತಾತ್ರೇಯ ಕುಲಕರಣಿ, ಕಾಂತರಾವ ಕುಮಲಾಪೂರ ಕಾರ್ಯದರ್ಶಿಗಳು, ಸುರೇಂದ್ರರಾವ ದೇಸಾಯಿ ಮತ್ತು ದತ್ತಾತ್ರೇಯ ಕರಮರಕರ ಇವರದೊಂದು 'ಲೋಕಮಾನ್ಯ ಸ್ಮಾರಕ ಮಂಡಲ'ವು ಏರ್ಪಡಿಸಲ್ಪಡಬೇಕೆಂದು ಗೊತ್ತಾಯಿತು. ಆದರೆ ಕಾರಣಾಂತರಗಳಿಂದ ಈ ಯೋಜನೆಯು ನೆರವೇರಲಿಲ್ಲವಾದುದರಿಂದ ಸ್ಮಾರಕನಿಧಿಯ ಸಹಾಯದಿಂದ ರಾಷ್ಟ್ರೀಯ ಭಾವನೆಯನ್ನಪೇಕ್ಷಿಸುವಂತಹ

೫೦-೬೦ ಪುಟಗಳ ಚಿಕ್ಕ ಗ್ರಂಥಗಳನ್ನು ಬರೆಯಿಸಿ ಪ್ರಸಿದ್ಧ ಮಾಡಬೇಕೆಂದೂ ಮತ್ತು ಪುಸ್ತಕಗಳನ್ನು ಪರೀಕ್ಷಿಸಿ ಪ್ರಕಟನೆಗಾಗಿ ಮುಂದರಿಸುವ ಕುರಿತು ಶ್ರೀ. ವಿನಾಯಕರಾವ ಜೋಶಿ, ಸುರೇಂದ್ರರಾವ ದೇಸಾಯಿ, ಮತ್ತು ದತ್ತಾತ್ರೇಯ ಕರಮುರಕರ ಈ ಮೂವರದೊಂದು ಮಂಡಲವಿರಬೇಕೆಂದೂ ತಾ॥ ೧೦-೧-೧೯೩೧ ದಿನ ಗೊತ್ತಾಯಿತು, ಆ ಗೊತ್ತಿನಂತೆ ಇದೀಗ ಮೊದಲನೆಯ ಪುಸ್ತಕವು ಪ್ರಸಿದ್ಧವಾಗಲಿದೆ.

ಇನ್ನು ಪ್ರಸ್ತುತ ಪುಸ್ತಕದ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳುವದು ಅವಶ್ಯವಿದೆ. ಲೋಕಮಾನ್ಯರ ವಿಷಯವಾಗಿ ಈ ಮೊದಲೇ ಬೇರೆ ಬೇರೆ ಭಾಷೆಗಳಲ್ಲಿ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಪ್ರಚಲಿತ ರಾಜಕೀಯ, ಸಾಮಾಜಿಕ ಪ್ರಶ್ನೆಗಳಿಗೆ ಸಂಬಂಧಿಸಿದ ಅವರ ಕೆಲವು ಲೇಖಗಳನ್ನೂ ವೃತ್ತಾಂತಗಳನ್ನೂ ಕಲೆಹಾಕಿ ಈ ಚಿಕ್ಕ ಪುಸ್ತಕವನ್ನು ಲೋಕಮಾನ್ಯ ಸ್ಮಾರಕಮಂಡಲದವರು ಪ್ರಕಟಿಸಿರುವರು.

**ಕಾರ್ಯದರ್ಶಿಗಳು**

# ಟಿಳಕ ಕಥಾಮೃತಸಾರ

## ಲೋಕಮಾನ್ಯರ ಜೀವನ ರಹಸ್ಯ

ಎಷ್ಟೋ ಸಾರೆ ಮನುಷ್ಯನಿಗೆ ಆತನ ಕೆಳೆಯರೆ ಕೇಡಿಗರು, ಕೇಡಿಗರೇ ಕೆಳೆಯರಾಗಿ ಪರಿಣಮಿಸುವರು. “ನನ್ನ ಗೆಳೆಯರಿಂದುಳಿಸು” ಎಂಬರ್ಥದ ಒಂದು ಗಾದೆಯೂ ಇಂಗ್ಲೀಷಿನಲ್ಲುಂಟು. ಈ ಮಾತು ಲೋ. ಟಿಳಕರ ವಿಷಯಕ್ಕಂತೂ ಒಂದಕ್ಕಿಂತ ಹೆಚ್ಚು ಸಂಗತಿಗಳಲ್ಲಿ ಸರಿಹೋಗುತ್ತದೆ. ರಾಜಕೀಯ ಕ್ಷೇತ್ರದೊಳಗಿನ ಲೋ. ಟಿಳಕರ ಕೀರ್ತಿಗೆ ಕಾರಣರು ಅವರ ವಿರೋಧಿಗಳಾದ ಆಂಗ್ಲೋ ಇಂಡಿಯನ್ ಪತ್ರಿಕಾಕಾರರೂ ಮತ್ತು ಆಳರಸರು. ಲೋ. ಟಿಳಕರ ನಿಜವಾದ ಇಂಗಿತವನ್ನರಿತು ಅವರಿಗೆ “ಭಾರತೀಯ ಅಶಾಂತಿಯ ಮೂಲಪುರುಷ” ರೆಂಬ ಸರ್ವಥಾ ಅನ್ವರ್ಥಕವೂ ಅರ್ಥಪೂರ್ಣವೂ ಆದ ಬಿರುದನ್ನು ಅರ್ಪಿಸಿದವರು ಸರ ವೆಲೆಂಟೈನ ಚಿರೋಲರು; ಲೋಕಮಾನ್ಯರನ್ನು ಕೆಣಕಿ, ಕಾಡಿಸಿ, ಪೀಡಿಸಿ, ಗೋಳಾಡಿಸಿ ಅವರ ಧೈರ್ಯ, ಶೌರ್ಯ, ಸತ್ವನಿಷ್ಠೆಗಳ ಪ್ರಕಟನೆಗೆ ಪುಟಕೊಟ್ಟು, ಹೊನ್ನಿನಂತೆ ಥಳಥಳಿಸಿ ಹೊಳೆಯಲಿಕ್ಕೆ, ಮಹಾ ಕೀರ್ತಿಗೆ ನಿಮಿತ್ತಕಾರಣರು ಅರಸಾಳುಗಳು. ವೇದಗಳಿಗೆ ಬಹಳ ಪ್ರಾಚೀನತೆಯು ಸಿಕ್ಕಬಾರದೆಂದು ಅವುಗಳ ಕಾಲವನ್ನು ಕ್ರಿಸ್ತಿಶಕಕ್ಕೆ ಶಕ್ಯವಿದ್ದಷ್ಟು ಸಮೀಪವಾಗಿ ಎಳೆದು ತರಲು ಹವಣಿಸುತ್ತಿದ್ದ ಯುರೋಪಿಯ ವಿದ್ವಾಂಸರ ಕ್ಷುದ್ರ ಪ್ರಯತ್ನವೆ ಲೋಕಮಾನ್ಯರ ವೇದಾಧ್ಯಯನಕ್ಕೂ, ‘ವೇದಕಾಲ ನಿರ್ಣಯ’ ವೆಂಬ ಅವರ ಜಗದ್ವಿಖ್ಯಾತ ಗ್ರಂಥಲೇಖನಕ್ಕೂ ಮೂಲ ಕಾರಣವು. ಲೋಕಮಾನ್ಯರ ಬಗ್ಗೆ ಜನರಲ್ಲಿ ಹಲವು ಬಗೆಯ ತಪ್ಪು

ತಿಳುವಳಿಕೆಗಳು ಉಂಟಾಗಲಿಕ್ಕೆ ಮುಖ್ಯವಾಗಿ ಅವರ ಮಿತ್ರರೇ ಕಾರಣರು. 'ಅಸ್ಪೃಶ್ಯೋದ್ಧಾರಕ್ಕೆ ಶ್ರೀ. ಟಿಳಕರು ಸಹಾಯ ಮಾಡಲಿಲ್ಲ; ಇವರು ಹಿಂದುಳಿದ ಸಮಾಜದ ಹಿತವಿರೋಧಿಗಳು. ಹಳೆಯ ನಿರ್ಜೀವ ಚಾತುರ್ವರ್ಣ್ಯವನ್ನು ಮತ್ತೆ ಪ್ರಸ್ಥಾಪಿಸಿ ತಮ್ಮ ಬ್ರಾಹ್ಮಣೀರಾಜ್ಯವನ್ನು – ಪೇಶವಾಯಿಯನ್ನು – ಆರಂಭಿಸಬೇಕೆಂದು ಇವರ ಎಲ್ಲ ಪ್ರಯತ್ನಗಳೂ ನಡೆದಿವೆ; ಎಂದು ಮುಂತಾಗಿ ಸತ್ಯಶೋಧಕರೇ ಮೊದಲಾದವರು ಗೊಣಗಲಿಕ್ಕೆ ನಿಜವಾಗಿ ಏನೂ ಕಾರಣವಿದ್ದಿಲ್ಲ. ಏಕೆಂದರೆ ಲೋಕಮಾನ್ಯರು ತಮ್ಮ ವೈಯಕ್ತಿಕ ಆಚರಣದಲ್ಲಿ ಇಂತಹ ಅದಾವ ಸಂಕುಚಿತ ವಿಚಾರಕ್ಕೂ ಅವಕಾಶ ಕೊಟ್ಟಿದ್ದಿಲ್ಲ. 'If a God were to tolerate Untouchability, I would not recognize him a God at all,' ದೇವನಿಗೆ ಅಸ್ಪೃಶ್ಯತೆಯು ಮಾನ್ಯವಿದ್ದರೆ ಅವನನ್ನು ದೇವರೆಂದು ನಂಬ ನೆಚ್ಚಲಿಕ್ಕೇ ನಾನು ಸಿದ್ಧನಿಲ್ಲವೆಂದು ಲೋಕಮಾನ್ಯರು ಮುಂಬೈಯಲ್ಲಿ ಶ್ರೀ. ಸಯಾಜಿರಾವ ಮಹಾರಾಜ ಗಾಯಕವಾಡ, ಬಡೋದೆ ಇವರ ಅಧ್ಯಕ್ಷತೆಯಲ್ಲಿ ಆದ ಅಸ್ಪೃಶ್ಯರ ಮಹಾಸಭೆಯಲ್ಲಿ ಘನಗಂಭೀರ ಗರ್ಜನೆಯನ್ನು ಮಾಡಿದ್ದು ಪ್ರಸಿದ್ಧವಿದೆ. ೧೯೦೦ ರಲ್ಲಿ ಲಾಹೋರಿಗೆ ರಾಷ್ಟ್ರೀಯ ಮಹಾಸಭೆಯು ಸೇರಿದಾಗ ಲೋ. ಟಿಳಕರೂ ಅಲ್ಲಿಗೆ ಹೋಗಿದ್ದರು. ಆಗ ದೇ. ಭ. ಲಾಲಾ ಲಜಪತರಾಯರಿಗೆ ಲೋಕಮಾನ್ಯರ ಪರಿಚಯವಾಗಿ ತಮ್ಮ ಮನೆಗೆ ಊಟಕ್ಕೆ ಕರೆದರು. ಲೋ. ಟಿಳಕರು ಪರಂಪರಾಪ್ರಿಯರೂ ಹಳೆಯ ಆಚಾರವಿಚಾರದವರೂ ಎಂಬ ಜನಜನಿತವಾರ್ತೆಯನ್ನು ಮೊದಲೇ ಕೇಳಿದ್ದ ಶ್ರೀ. ಲಾಲಾ ಲಜಪತರಾಯರು ಅವರನ್ನು ತಮಗೆ 'ಬ್ರಾಹ್ಮಣನಿಂದ ಅಡಿಗೆ ಮಾಡಿಸುವೆನು' ಎಂದು ವಿಜ್ಞಾಪಿಸಿಕೊಂಡರು. ಕೂಡಲೆ ಲೋ. ಟಿಳಕರು ಅದು ತಮಗೆ ಅನವಶ್ಯಕವೆಂದೂ ಬೇಕಾದವನಿಂದ ಬೇಯಿಸಲ್ಪಟ್ಟಿದ್ದರೂ 'ಪಕ್ವವಾದ ಅನ್ನವನ್ನು ತಕ್ಕೊಳ್ಳಲಿಕ್ಕೆ ಯಾವ ಅಡ್ಡಿಯೂ ಇಲ್ಲ'ವೆಂದೂ ಹೇಳಿದರು. ಆದರೆ ಲಾಲಾಜಿಯವರಿಗೆ ಇಷ್ಟರಿಂದಲೇ ಸಂಶಯವು ದೂರವಾಗದೆ

ಮತ್ತೆ ಜನ್ಮವಿಸಿದರು ' ತಮ್ಮ ಆಕ್ಷೇಪಣೆಯಿಲ್ಲದಿದ್ದರೆ ನನ್ನ ಹೆಂಡತಿಯು ಅಡಿಗೆಯನ್ನು ಮಾಡುವಳು. ಅಷ್ಟಾಗಿ ಕೊಡಿಸಿದರೆ ತಮಗೆ ಬೇಕಾದ ವಿಶಿಷ್ಟ ಜಾತಿಯ ಬ್ರಾಹ್ಮಣನಿಂದಲೂ ಊಟವನ್ನು ಸಿದ್ಧಪಡಿಸುವೆನು. ಆಗ ಲೋಕಮಾನ್ಯರು ಈ ಮಾತನ್ನೇ ಬದಿಗೊತ್ತಿಬಟ್ಟರು. ಯಾವ ಭೇದಭಾವವಿಲ್ಲದೆ ಶ್ರೀ. ಲಾಲಾಜಿಯವರೊಡನೆ ಲೋ. ಟಿಳಕರ ಸಹಭೋಜನವಾಯಿತು. ಇಂತಹ ಪ್ರಸಂಗವು ಇದೊಂದೇ ಅಲ್ಲ. ನೂರಾರು ಉಂಟು. ಲೋ. ಟಿಳಕರು ಇಂಗ್ಲೆಂಡಿಗೆ ಹೋಮರೂಲಿನ ಕಾರ್ಯಕ್ಕಾಗಿ ಹೊರಟಾಗ ಅವರ ಸನ್ಮಾನಾರ್ಥವಾಗಿ ಮುಂಬೈಯಲ್ಲಿ ಒಂದು ಸಾರ್ವಜನಿಕ ಭೋಜನಸಮಾರಂಭವಾಯಿತು. ಅದರೊಳಗೆ ಲೋಕಮಾನ್ಯರೊಡನೆ ಡಾ. ಅನೆಬಿಸಂಟ ಮೊದಲಾದವರೂ ಅತಿಥಿಗಳಾಗಿದ್ದರು. ಪತಿತೋದ್ಧಾರಕ್ಕಾಗಿ ಆ ಜನ್ಮ ಸೇವೆ ನಡಿಸಿದ ಶ್ರೀಮಾನ್ ವಿಠ್ಠಲ ರಾಮಜಿ ಸಿಂಧೆಯವರು ಅಸ್ಪೃಶ್ಯತೆಯ ಕಲಂಕವನ್ನು ಸಂಪೂರ್ಣವಾಗಿ ತೊಡೆದುಬಿಡಲಿಕ್ಕೆಂದು ಒಂದು ಸಾರ್ವಜನಿಕ ಸಹಭೋಜನವನ್ನು ಮಾಡಿಸಬೇಕೆಂದು ಗೊತ್ತು ಮಾಡಿದ್ದರು. ಈ ಭೋಜನಪ್ರಸಂಗದಲ್ಲಿ ಅಸ್ಪೃಶ್ಯರೊಡನೆ ಊಟಕ್ಕೆ ಅನೇಕ ಪ್ರಮುಖ ಮನುಷ್ಯರಿಗೂ ಔತಣಕೊಟ್ಟಿದ್ದರು. ಲೋಕಮಾನ್ಯರಿಗೂ ನಿಮಂತ್ರಣವಿದ್ದು ಅವರು ಅದನ್ನು ಆನಂದದಿಂದ ಸ್ವೀಕರಿಸಿದ್ದರೆಂದು ಶ್ರೀ. ಸಿಂಧೆಯವರೇ ಬರೆದಿದ್ದಾರೆ. ಆದರೆ ಲೋಕಮಾನ್ಯರು ಅಕಸ್ಮಾತ್ತಾಗಿ ತೀರಿಕೊಂಡದ್ದರಿಂದ ಆ ಯೋಗವು ಒದಗಿ ಬರಲಿಲ್ಲ.

ನಿಜ ಸ್ಥಿತಿಯು ಹೀಗಿದ್ದರೂ ಲೋ. ಟಿಳಕರು ನವಮತ ವಿರೋಧಿಗಳು, ಪುರಾಣಪ್ರಿಯರೆಂದು ದೂಷಣೆಗೆ ಕಾರಣರಾದುದೇಕೆ? ಅವರ ಮಿತ್ರರಿಂದ. ಲೋ. ಟಿಳಕರ ಸುತ್ತಲೂ ಇದ್ದ ಮಿತ್ರರು ಮತ್ತು ಅನುಯಾಯಿಗಳಲ್ಲಿ ನಿಜವಾಗಿ ಪುರಾಣಪ್ರಿಯರೂ ನವಮತ ವಿರೋಧಿಗಳೂ ಆದವರೇ ಹೆಚ್ಚಾಗಿ ತುಂಬಿದ್ದರು. ಲೋ. ಟಿಳಕರು 'ಸಮ್ಮತಿ ವಯಸ್ಸಿನ ಕಾನೂನಿಗೆ' ವಿರೋಧಿಸಿದ್ದು ಆ ಕಟ್ಟಳೆ

ಅನ್ಯಾಯವಿದ್ದು, ಅನೀತಿಯಿದು ಎಂದಲ್ಲ. ಪರಕೀಯ ಸರಕಾರದವರು ನಮ್ಮ ಧಾರ್ಮಿಕ ಆಚಾರವಿಚಾರಗಳಲ್ಲಿ ಕೈಹಾಕ ಕೂಡದು ಎಂಬ ತತ್ವದ ಸಲುವಾಗಿ. ಲೋಕಮಾನ್ಯರ ಉದ್ದೇಶವು ಹೀಗಿದ್ದುದಾದರೂ ಅವರ ಅನುಯಾಯಿಗಳಲ್ಲಿ ಬಹುತರ ಎಲ್ಲರಿಗೆ ಹೆಣ್ಣುಮಕ್ಕಳ ಮದುವೆಯು ಎಂಟು ಹತ್ತು ವರ್ಷಕ್ಕೆ ಮೀರಿ ಆಗಲೇ ಕೂಡದು ಎಂದೇ ಇತ್ತು. ಆದರೆ ಲೋ. ಟಿಳಕರು ಮಾತ್ರ ತಮ್ಮ ಹೆಣ್ಣುಮಕ್ಕಳ ಮದುವೆಯನ್ನು ೧೩-೧೪ನೆಯ ವರ್ಷದೊಳಗಾಗಿ ಮಾಡಲಿಲ್ಲ! ಹೀಗಿದ್ದರೂ ಸಂಗಡಿಗರೂ, ಗೆಳೆಯರೂ ಆದವರ ಅಭಿಪ್ರಾಯ, ಆಚಾರಗಳ ಛಾಯೆಯು ಲೋಕಮಾನ್ಯರ ಮೇಲೆ ಬಿದ್ದು ಟೀಕೆಗೆ ಆಸ್ಪದವುಂಟಾಯಿತು.

'ಶಿಷ್ಯಾಪರಾಧೇ ಗುರೋರ್ದಂಡಃ' ಎಂಬಂತಾಗಿದೆ. ಇದೆಲ್ಲ. ಲೋಕಮಾನ್ಯರ ಸ್ನೇಹಿತರೂ, ಅನುಯಾಯಿಗಳೂ ಆದ ಹಲವರ ಕೃತಿಗಳಿಂದ ಲೋಕಮಾನ್ಯರ ಹೆಸರೂ ಅವರ ಪರಂಪರೆಯೂ ಸ್ವಲ್ಪ ಮೇಘಾಚ್ಛಾದಿತ ಚಂದ್ರಮನಂತಾಗಿದೆ. ತಮ್ಮದು ಹಿರಿದು, ಹೆಚ್ಚಿನದು ಎಂದು ಹೇಳುವದಕ್ಕಾಗಿ ಎಷ್ಟೋ ಟಿಳಕ ಪಂಥಿಗಳು ಮಾಡುತ್ತಿರುವ ಮ. ಗಾಂಧಿಯವರ ನಿಂದೆ ಹೀಗಳಿಕೆಗಳಿಂದ ಇಂತಹ ಶಿಷ್ಯರ ಗುರುವೂ ಹಾಗೆಯೇ ಇದ್ದನೇನೊ ಎಂಬ ಸಂಶಯವು ಜನಮನದಲ್ಲಿ ಮೂಡಿ ಮರೆಯಾಗುತ್ತಲಿದೆ.

ಅನುಯಾಯಿಗಳು ಬಿದ್ದರೆಂದು ಆವುದೆ ಧರ್ಮವನ್ನು ಅಥವಾ ಅವರ ಮೂಲ ಸಂಸ್ಥಾಪಕರನ್ನು ಹೀಯಾಳಿಸುವುದು ಸರಿಯಾದೀತೆ? ಅನಾಚಾರಿಯಾದ ಅದ್ವೈತಿಯಿಂದ, ಅಥವಾ ದುರಾಚಾರಿಯಾದ ದ್ವೈತಿಯಿಂದ ಶಂಕರ ಅಥವಾ ಮಧ್ವರು ಕ್ಷುಲ್ಲಕರೆಂದು ಎಣಿಸಲ್ಪಡುವುದು ಎಂದೆಂದಿಗೂ ಸಾಧ್ಯವಿಲ್ಲ. ಲೋ. ಟಿಳಕರ ಮಾತಾದರೂ ಹಾಗೆಯೆ ಇದೆ.

ಲೋಕಮಾನ್ಯ ಟಿಳಕರು ಯುಗ ಪುರುಷರು. ಇಂತಹ ಮಹಾ ವಿಭೂತಿಗಳು ನೂರಿನ್ನೂರು ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುತ್ತಿರು

ತ್ತವೆ. ಲೋಕಮಾನ್ಯರು ಮಾಡಿದ ಮಹಾ ಕಾರ್ಯದ ಅಲ್ಪಸ್ವಲ್ಪಾದರೂ ಕಲ್ಪನೆಯುಂಟಾಗಬೇಕಾದರೆ ಅವರು ಕಾರ್ಯರಂಗದ ಮೇಲೆ ಅವತೀರ್ಣರಾದಾಗ ದೇಶದ ಸ್ಥಿತಿಯೇನಿತ್ತು; ಅವರು ಇಹಲೋಕ ಯಾತ್ರೆಯನ್ನು ಮುಗಿಸಿದ ಕಾಲಕ್ಕೆ ದೇಶವು ಯಾವ ತರಗತಿಗೆ ಬಂದಿತ್ತು ಎಂಬುದನ್ನು ಒಂದರಗಳಿಗೆಯಾದರೂ ವಿಚಾರಿಸುವುದು ಅಗತ್ಯವಾಗಿದೆ.

ಶ್ರೀ. ಟಿಳಕರು ತಮ್ಮ ಸಾರ್ವಜನಿಕ ಆಯುಷ್ಯಕ್ರಮಣಕ್ಕೆ ಆರಂಭ ಮಾಡಿದುದು ೧೮೮೦ ರ ಜನೆವರಿ ಮೊದಲನೆಯ ತಾರೀಖಿಗೆ. ಅಂದೇ ಮಹಾರಾಷ್ಟ್ರದಲ್ಲಿ ನವಜೀವನವನ್ನೆರೆದ 'ನ್ಯೂ ಇಂಗ್ಲಿಷ ಸ್ಕೂಲ' ಎಂಬ ಶಿಕ್ಷಣ ಸಂಸ್ಥೆಯು ಹೊರಟುದು. ಈ ಸಂಸ್ಥೆಯಲ್ಲಿ ಆ ಜನ್ಮ ಸೇವೆ ಮಾಡುವುದಕ್ಕೆ ಲೋ. ಟಿಳಕರು ಇನ್ನುಳಿದ ತಮ್ಮ ಸಹಕಾರಿಗಳೊಡನೆ ದೀಕ್ಷೆ ಪಡೆದರು. ಆಗ ಶ್ರೀ. ಟಿಳಕರಿಗೆ ಇನ್ನೂ ೨೪ ವರ್ಷಗಳು ತುಂಬಿದ್ದಿಲ್ಲ. ಆ ಕಾಲದಲ್ಲಿ ದೇಶದಲ್ಲಿ ಇಂಗ್ಲಿಷ ಕಲಿತವರ ಸಂಖ್ಯೆಯು ಕಡಿಮೆ. ಅದರೊಳಗೂ ವಿಶ್ವವಿದ್ಯಾಲಯದ ಪದವಿಗಳನ್ನು ಪಡೆದವರು ಇನ್ನಿಷ್ಟು ಕಡಿಮೆ. ಬರಿ ನಾಲ್ಕೈದು ಇಯತ್ತೆ ಇಂಗ್ಲಿಷು ಕಲಿತವರಿಗೂ ದೊಡ್ಡ ದೊಡ್ಡ (ನಿಯೋಗ) ನೌಕರಿಗಳು ಸಿಕ್ಕುತ್ತಿದ್ದವು, ಬಿ. ಎ., ಎಂ. ಎ. ಆದವರಿಗಂತೂ ನೂರಿನ್ನೂರು ರೂಪಾಯಿಗಳ ಸಂಬಳದ ಸ್ಥಳಗಳು ದಾರಿ ನೋಡುತ್ತಲೆ ಇದ್ದವು. ಇಂತಹ ಮನಮೋಹಕ ಆಮಿಷವು ಕಣ್ಣೆದುರಿಗಿರುವಾಗ ಅದನ್ನು ಕಣ್ಣೆತ್ತಿ ನೋಡದೆ ದೂರ ದೃಷ್ಟಿಯಿಂದ ವಿಚಾರಿಸಿ ಸಮಾಜ ಹಿತ, ದೇಶ ಹಿತಕ್ಕಾಗಿ ಸ್ವಾರ್ಥತ್ಯಾಗದಿಂದ ಆತ್ಮಾರ್ಪಣ ಮಾಡಿಕೊಳ್ಳುವ ಬುದ್ಧಿ ಹುಟ್ಟುವುದು ಎಷ್ಟು ಮಂದಿಗೆ? ಮನೆಯಲ್ಲಿ ಕಕ್ಕನೂ, ಅಕ್ಕನೂ ತುಂಬಾ ಒತ್ತಾಯ ಪಡಿಸುತ್ತಿದ್ದರೂ ಲೋಕಮಾನ್ಯರು ನ್ಯೂ ಇಂಗ್ಲಿಷ ಸ್ಕೂಲಿಗೆ ಸೇರಿ ಲೋಕಶಿಕ್ಷಣ ಕಾರ್ಯವನ್ನೇ ಕೈಕೊಳ್ಳುವುದನ್ನು ನಿರ್ಧರಿಸಿದರು. ಈ ಶಾಲೆಯ ಮೂಲ

ಸಂಸ್ಥಾಪಕರಾದ ಶ್ರೀ. ಟಿಳಕ ಶ್ರೀ. ಆಗರಕರ ಪ್ರಭೃತಿಗಳು ಜೆಸು ಯಿಟ್ ಪಾದ್ರಿಗಳಂತೆ ತಮ್ಮ ಆಯುಷ್ಯವನ್ನೇ ಸಂಪೂರ್ಣವಾಗಿ ಈ ಸಂಸ್ಥೆಗೆ ಅರ್ಪಿಸುವುದನ್ನು ನಿಶ್ಚಯಿಸಿದ್ದರು. ಹೊಟ್ಟೆ ಬಟ್ಟೆಯ ಮಟ್ಟಿಗೆ ಮಾತ್ರ ವೇತನವನ್ನು ತಕ್ಕೊಳ್ಳಬೇಕು; ಯಾರೂ ತಮ್ಮ ವೈಯಕ್ತಿಕ ಉತ್ಪನ್ನಸಂಗ್ರಹಗಳೆಂದು ಬೇರೆ ಏನೂ ಇಟ್ಟುಕೊಳ್ಳ ಕೂಡದು. ತಾವು ಗಳಿಸಿದ್ದನ್ನೂ ಗಳಿಸುವದನ್ನೂ ಈ ಸಂಸ್ಥೆಗೇ ಸಲ್ಲಿಸಬೇಕು ಎಂಬ ನಿರ್ಬಂಧವನ್ನು ಹಾಕಿಕೊಂಡಿದ್ದರು. ಇಷ್ಟೊಂದು ಕಠೋರ ನಿಯಮಗಳನ್ನು ಹಾಕಿಕೊಂಡು ದೇಶಸೇವಾವ್ರತವನ್ನು ಕೈಕೊಂಡ ಆ ಜೀವಗಳ ಧೀರೋದಾತ್ತ ಸ್ವರೂಪವು ಆಗಿನ ಅಮಿಷ ಗಳನ್ನು ನೆನಿಸಿದರೆ ಇನ್ನಷ್ಟು ಚೆನ್ನಾಗಿ ವ್ಯಕ್ತವಾಗುತ್ತದೆ. ಶಾಲೆ ಯಲ್ಲಿ ಸೇರಿದಬಳಿಕ ಕೆಲ ದಿನಗಳ ಮೇಲೆ ಶ್ರೀ. ಟಿಳಕರಿಗೂ ಅವರ ಸಹಕಾರಿಗಳಲ್ಲಿ ಹಲವರಿಗೂ ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳಲ್ಲಿ ಮತಭೇದವಾಗಿ ಶ್ರೀ. ಟಿಳಕರು ತಮ್ಮ ಶಾಲೆಯ ಕೆಲ ಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಕೇಸರಿ ಮತ್ತು ಮರಾಠಾ ಪತ್ರಿಕೆಗಳನ್ನು ಅವರ ೭೦೦೦ (ಏಳು ಸಾವಿರ) ರೂ. ಸಾಲ ಸಹಿತ ವಹಿಸಿಕೊಂಡರು. ಕೇಸರೀ ಪತ್ರಿಕೆಯು ಜನಮನವನ್ನು ತನ್ನ ಕಡೆಗೆ ಕ್ರಮಕ್ರಮವಾಗಿ ಎಳೆದುಕೊಳ್ಳಲಾರಂಭಿಸಿತ್ತು. ಕೊಲ್ಹಾಪೂರ ಮಹಾರಾಜರನ್ನು ದಿವಾಣರು ಬಹಳ ಅನ್ಯಾಯದಿಂದ ನಡಿಸಿಕೊಳ್ಳು ತ್ತಿದ್ದರೆಂದು ತಿಳಿದು ಶ್ರೀ. ಟಿಳಕರೂ ಶ್ರೀ. ಆಗರಕರರೂ ನಿದಾರ್ಕ್ಷಿಣ್ಯಾ ದಿಂದ ಟೀಕೆ ಮಾಡಿದರು. ಇದಕ್ಕಾಗಿ ಇಬ್ಬರಿಗೂ ೧೦೧ ದಿನಗಳ ಕಾರಾಗ್ರಹವಾಸವನ್ನು ಅನುಭವಿಸಬೇಕಾಯಿತು. ಆದರೆ ಇದರಿಂದ ಎಳ್ಳಷ್ಟೂ ಎದೆಗುಂದದೆ ಶ್ರೀ. ಟಿಳಕರು ಮತ್ತಿಷ್ಟು ಉತ್ಸಾಹದಿಂದ ಲೋಕಸೇವಾ ವ್ರತವನ್ನು ಮುಂದರಿಸಿದರು.

ಪತ್ರಿಕಾ ವ್ಯವಸಾಯವು ಸ್ವಲ್ಪವೂ ಲಾಭದಾಯಕವಲ್ಲ ವೆಂಬುದು ಕೇಸರಿ ಮರಾಠಾ ಪತ್ರಿಕೆಗಳಿಗೆ ಹೊರಬೇಕಾಗಿದ್ದ ೭೦೦೦

ರೂ. ಗಳ ಸಾಲದಿಂದಲೇ ಗೊತ್ತಾಗುತ್ತಿತ್ತು. ಕೈಯಿಂದ ಹಣ ಕಳೆದುಕೊಂಡು ದೇಶಸೇವೆ ಮಾಡುವ ಅವ್ಯಾಪಾರೇಷು ವ್ಯಾಪಾರ ವಷ್ಟೇ ಅಲ್ಲದೆ ಇದರಲ್ಲಿ ಪತ್ರಿಕೆಯೊಳಗಿನ ಲೇಖನಗಳಿಂದ ಸರಕಾರದ ಅವಕೃಪೆಗೆ ಪಾತ್ರರಾಗಿ ಕಾರಾಗೃಹಾದಿ ಶಾಸನಗಳಿಗೂ ಒಳಗಾಗ ಬೇಕಾಗುವುದು; ಆದಕಾರಣ ಈ ಉದ್ಯೋಗವೇ ಬೇಡವೆಂದು ಅವರ ಆಪ್ತೇಷ್ಟರಲ್ಲಿ ಹಲಕೆಲವರು ಹೇಳದೆ ಇರಲಿಲ್ಲ. ಆದರೆ ಶ್ರೀ. ಟಿಳಕರು ಇಂತಹ ಯಾವ ಕ್ಷುದ್ರ ಎಣಿಕೆಗಳ ಬಲಿಗೆ ಸಿಲುಕದೆ ಆತ್ಮವಿಶ್ವಾಸ ದಿಂದ ತಾವು ಕೈಕೊಂಡ ಕೆಲಸವನ್ನೇ ಮುಂದೆ ಸಾಗಿಸಿದರು.

ಈ ಹೊತ್ತಿಗೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಮಹಾಸಭೆಯು ಸ್ಥಾಪಿತವಾಗಿ ಎರಡು ವರ್ಷಗಳಾಗಿದ್ದವು. ರಾಷ್ಟ್ರೀಯ ಸಭೆಯಲ್ಲಿ ಈಗಿನಂತಹ ರಾಷ್ಟ್ರೀಯ ಜ್ಯೋತಿಯೇ ಇದ್ದಿಲ್ಲ. ಹೆಸರು ಮಾತ್ರ ರಾಷ್ಟ್ರೀಯಸಭೆ. ಮಹಾಸಭೆಯಲ್ಲಿ ವರ್ಷಕ್ಕೆ ಒಂದು ಸಾರೆ ಒಂದೆರಡು ದಿನ ಯಾವದಾದರೂ ಒಂದು ದೊಡ್ಡ ಊರಲ್ಲಿ ಎಲ್ಲರೂ ಸೇರುವುದು. ಸರಕಾರದ ಹತ್ತಿರ 'ನಮಗೆ ಆ ಕೆಲಸ ಕೊಡಿರಿ, ಈ ಕೆಲಸ ಕೊಡಿರಿ' ಎಂದು ಮುಂತಾಗಿ ಬೇಡಿಕೊಳ್ಳುವ ದೈನ್ಯವೃತ್ತಿ ಠರಾವುಗಳನ್ನು ಮಾಡುವುದು; ಇದಿಷ್ಟೇ ಕೆಲಸ.

೧೮೫೭ ರಲ್ಲಿ ಹಿಂದೀ ಜನರು ಸಶಸ್ತ್ರ ಪ್ರತೀಕಾರ ಮಾಡಿ ಕಳೆದು ಕೊಂಡ ಸ್ವಾತಂತ್ರ್ಯವನ್ನು ಬ್ರಿಟಿಶರಿಂದ ಕಸಿದುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಹತವೀರ್ಯರಾಗಿದ್ದರು. ಜನರು ನಿಶ್ಶಸ್ತ್ರರಾದರು. ಆತ್ಮ ವಿಶ್ವಾಸವು ಅಳಿದು ಹೋಯಿತು. ಹೊಟ್ಟೆಯೊಳಗಿನ ಸಿಟ್ಟು ರಟ್ಟೆ ಯಲ್ಲಿರಲಿಲ್ಲ. ಆದುದರಿಂದ ಪರಕೀಯರ ಆಳಿಕೆಯ ಅನ್ಯಾಯಗಳನ್ನು ಸುಮ್ಮನೆ ನುಂಗಿಕೊಂಡು ಇರುವದರ ಹೊರ್ತು ಬೇರಿನ್ನಾವ ದಾರಿಯೂ ಜನರಿಗೆ ತೋಚಲೊಲ್ಲದು. ರಾಷ್ಟ್ರೀಯ ಮಹಾಸಭೆಯು ಜನ್ಮತಾಳಿದ್ದರೂ ಅದರ ಉತ್ಪಾದಕರು ಬ್ರಿಟಿಶರ ನ್ಯಾಯಬುದ್ಧಿಯಲ್ಲಿ ಸಂಪೂರ್ಣ ನಿಷ್ಠೆಯುಳ್ಳವರಾಗಿದ್ದರು. ಆದಕಾರಣ ಅವರಿಗೆ ಸರ

ಕಾರದ ಅನ್ಯಾಯಗಳನ್ನು ತೀಕ್ಷ್ಣಶಬ್ದಗಳಿಂದ ಹೇಳುವುದಕ್ಕೆ ಸಹ ಮನಸು ಇದ್ದಿಲ್ಲ. ಬ್ರಿಟಿಶರು ನ್ಯಾಯನಿಷ್ಠರಾದ ಆಡಳಿತಗಾರರು. ಅವರು ಹಿಂದುಸ್ತಾನವನ್ನು ಆಳುತ್ತಿರುವುದು ಹಿಂದೀ ಜನರ ಕಲ್ಯಾಣಕ್ಕಾಗಿ ಎಂದು ಆಗಿನ ರಾಷ್ಟ್ರೀಯ ಸಭೆಯ ಚಾಲಕರು ನಂಬಿಕೊಂಡಿದ್ದರು. ಬ್ರಿಟಿಶರಿಂದ ತಮಗಾಗುವ ಕಷ್ಟನಷ್ಟಗಳನ್ನು ತಿಳಿಸಿ ಹೇಳಿದೊಡನೆ ಅವುಗಳ ನಿವಾರಣೆಯಾಗುವುದು ಎಂಬ ವಿಶ್ವಾಸದಿಂದಲೇ ಆಗಿನ ರಾಷ್ಟ್ರೀಯ ಸಭೆಯ ಸೂತ್ರಧಾರರು ಇಂಗ್ಲೆಂಡಿಗೆ ಶಿಷ್ಟಮಂಡಳಗಳನ್ನು ಕಳಿಸಿದರು. ಬ್ರಿಟಿಶ ಜನಾಂಗಕ್ಕೆ ಹಿಂದೀ ಜನರ ಆಕಾಂಕ್ಷೆಗಳನ್ನು ತಿಳಿಸಿ ಹೇಳಿದರು. ವೈಸರಾಯರಿಗೆ ಭೆಟ್ಟಿಯಾದರು; ತಮ್ಮ ಬೇಡಿಕೆಗಳನ್ನು ಅರಿಕೆ ಮಾಡಿಕೊಂಡರು. ಆದರೇನು? ಈ ಬಗೆಯ ಯಾಚನೆಯಿಂದ ಏನೂ ಲಾಭವಾಗಲಿಲ್ಲ, ಸರಕಾರಿ ಅಧಿಕಾರಿಗಳ ಅನ್ಯಾಯವು ಮಾತ್ರ ಹೆಚ್ಚಾಯಿತು.

ಶ್ರೀ. ಟಿಳಕರಿಗೆ ಬ್ರಿಟಿಶ ನ್ಯಾಯನಿಷ್ಠೆಯಲ್ಲಿ ಎಂದೂ ವಿಶ್ವಾಸವಿದ್ದಿಲ್ಲ. ಬ್ರಿಟಿಶರು ಹಿಂದುಸ್ತಾನದ ಹಿತಕ್ಕಾಗಿ ಹಿಂದುಸ್ತಾನವನ್ನು ಆಳುತ್ತಿರದೆ ಇಂಗ್ಲಂಡ ಲಾಭವಾಗಬೇಕೆಂದು, 'ಇಂಗ್ಲಂಡದ, ಸಂಪತ್ತು ಬೆಳೆಯಬೇಕೆಂದು, ಎಂದೇ ಶ್ರೀ. ಟಿಳಕರು ವಿಚಾರಪೂರ್ವಕವಾಗಿ ಅರಿತುಕೊಂಡಿದ್ದರು. ಬ್ರಿಟಿಶರು ಹಿಂದುಸ್ತಾನಕ್ಕೆ ಬಂದುದು ದೈವೀ ಸಂಕಲ್ಪದ ಮೂಲಕ, ಅವರು ಹಿಂದುಸ್ತಾನದ ಮೇಲೆ ರಾಜ್ಯಭಾರವನ್ನು ನಡಿಸಿ ಅನಂತ ಉಪಕಾರವನ್ನು ನಡಿಸಿದ್ದಾರೆ ಎಂಬ ವಿಚಾರ ಪದ್ಧತಿಯೇ ಶ್ರೀ. ಟಿಳಕರಿಗೆ ಮಾನ್ಯವಿದ್ದಿಲ್ಲ. ಬ್ರಿಟಿಶರು ವಿಶ್ವಯನ್ನು ಹೊಂದುತ್ತಲಿದ್ದಾರೆ. ಆಸೇತು ಹಿಮಾಚಲ ಯಾವನೇ ಆಗಲಿ ಕೋಲಿನ ತುದಿಗೆ ಹೊನ್ನು ಕಟ್ಟಿಕೊಂಡು ನಿರ್ಭೀತಿಯಿಂದ ಯಾತ್ರೆ ಮಾಡಬಹುದು ಎಂದು ಬ್ರಿಟಿಶರ ಭಕ್ತಿಯಿಂದ ಪರವಶರಾಗಿ ಆಗಾಗ್ಗೆ ಉಪನ್ಯಾಸ ಲೇಖನಾದಿಗಳಲ್ಲಿ ಪ್ರತಿಪಾದಿಸುವ ಮರುಳರನ್ನು ಕಂಡು ಲೋಕಮಾನ್ಯರ ಹೊಟ್ಟೆಯಲ್ಲಿ ಬೆಂಕೆ ಏಳುತ್ತಿತ್ತು.

"ಕೋಲಿನ ತುದಿಗೆ ಬಂಗಾರವನ್ನು ಕಟ್ಟಿಕೊಂಡು ಹೋದರೆ ಬಡೆಯುವವರಿಲ್ಲ" ನಿಜ. ಆದರೆ ಕಟ್ಟಿಕೊಂಡು ಹೊರಡಲು ಬಂಗಾರವು ಯಾರ ಹತ್ತರ ಉಳಿದಿದೆ? ಎಂದು ಲೋಕಮಾನ್ಯರು ತಟ್ಟನೆ ಕೇಳುತ್ತಿದ್ದರು. ಬ್ರಿಟಿಶರ ಆಳಿಕೆಯಿಂದ ಹಿಂದೂದೇಶವು ದಿನದಿನಕ್ಕೆ ಬಡವಾಗಿ ಹೊಟ್ಟೆಗೆ ಕೂಳಿಲ್ಲದ ಸ್ಥಿತಿಗೆ ಬಂದಿದೆ ಎಂದು ಲೋಕಮಾನ್ಯರು ನಿದಾರ್ಕ್ಷಿಣ್ಯದಿಂದ ಪ್ರತಿಪಾದಿಸುತ್ತಿದ್ದರು.

ಈ ಪ್ರಕಾರವಾಗಿ ಆಗಿನ ರಾಷ್ಟ್ರೀಯ ಸಭೆಯ ಸೂತ್ರ ಚಾಲಕರಲ್ಲಿಯೂ ಲೋ. ಟಿಳಕರಲ್ಲಿಯೂ ಮೂಲತಃ ಮತಭೇದವಿದ್ದುದರಿಂದ ಇವರಿಬ್ಬರು ಎಂದೂ ಕೂಡಿ ನಡೆಯಲಿಲ್ಲ. ಲೋಕಮಾನ್ಯರು ಕೇಸರಿ ಮತ್ತು ಮರಾಠಾ ಪತ್ರಿಕೆಗಳ ಮುಖಾಂತರವಾಗಿ ಜನರಿಗೆ ರಾಷ್ಟ್ರೀಯ ವೃತ್ತಿಯ ಉಪದೇಶವನ್ನು ನಡಿಸಿದರು. ನಿರ್ಭೀತರಾಗಿ ನ್ಯಾಯವಾದ ಹಕ್ಕುಗಳನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸಿರೆಂಬುದೇ ಲೋ. ಟಿಳಕರ ಉಪದೇಶದ ಮುಖ್ಯ ವಿಷಯವಾಗಿತ್ತು. ಈ ಉಪದೇಶವನ್ನು ಜನರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಮಾಡಿಸುವುದಕ್ಕಾಗಿ ಕಾಲಕಾಲಕ್ಕೆ ಪ್ರಾಪ್ತವಾಗುವ ಯಾವ ಪ್ರಸಂಗವನ್ನೂ ಅವರು ವ್ಯರ್ಥವಾಗಿ ಹೋಗಗೊಡುತ್ತಿದ್ದಿಲ್ಲ. ಸರಕಾರಿ ಅಧಿಕಾರಿಗಳಿಂದಾಗುವ ತಪ್ಪುತಡೆಗಳನ್ನೂ, ಕಾಯಿದೆ ಕಾನೂನುಗಳಲ್ಲಿರುವ ನ್ಯೂನಾಧಿಕ್ಯಗಳನ್ನೂ ವಿವರಿಸಿ ಸ್ವಾತಂತ್ರ್ಯ ಕಳೆದುಕೊಂಡುದರಿಂದ ಹಿಂದೀ ಜನರು ಎಷ್ಟು ಅನ್ಯಾಯಗಳನ್ನು ಸಹಿಸಬೇಕಾಗಿದೆಯೆಂಬುದನ್ನು ಜನರಿಗೆ ಸ್ಪಷ್ಟ ಸ್ಪಷ್ಟ ಮಾಡಿ ತೋರಿಸುತ್ತಿದ್ದರು. ಲೋ. ಟಿಳಕರ ಕೇಸರಿ ಪತ್ರಿಕೆಯೆಂದರೆ ಅದೊಂದು ಬ್ರಿಟಿಶರ ನೂರಾಎಂಟು ಅನ್ಯಾಯಗಳ ಒಂದು ಪಟ್ಟಿ. ಲೋಕಮಾನ್ಯರ ಯಾವದೇ ಕೇಸರಿಯನ್ನೋದಲಿ, ಪರಕೀಯರ ಅನ್ಯಾಯದ ಘೋರವಾದ ಈ ಆಳಿಕೆಯು ಎಂದಿಗೆ ಅಳಿಯುವುದೊ ದೇವಾ ಎಂಬ ಕಳವಳವಾದ ಕೂಗು ಹೃದಯದೊಳಗಿಂದ ಏಳದೆ ಇರುತ್ತಿದ್ದಿಲ್ಲ.

ಕೇಸರಿ ಪತ್ರಿಕೆಯ ಮುಖಾಂತರವಾಗಿ ಜನರಿಗೆ ತಮ್ಮ ಪಾರ ತಂತ್ರ್ಯದ ಬಗ್ಗೆ ಹೇಸಿಕೆಯುಂಟಾಗುವಂತೆ ಮಾಡಿ ಅಷ್ಟರಿಂದಲೆ ಲೋಕಮಾನ್ಯರು ತೃಪ್ತರಾಗಲಿಲ್ಲ. ತಮ್ಮ ಸ್ವಂತದ ನಡೆವಳಿಯಿಂದ ದೇಶೋನ್ನತಿಯಾಗಬೇಕಾಗಿದ್ದರೆ ಪ್ರತಿಯೊಬ್ಬ ನಾಗರಿಕನೂ ಹೇಗೆ ನಡಕೊಳ್ಳಬೇಕೆಂಬ ಪಾಠವನ್ನೆ ಬೋಧಿಸುತ್ತಿದ್ದರು. ಸ್ವಾಭಿಮಾನ, ಆತ್ಮವಿಶ್ವಾಸಗಳಿಲ್ಲದೆ ಯಾವ ದೇಶವೂ ಮುಂದುವರಿಯಲಾರದೆಂಬ ಮಾತನ್ನು ಅರಿತು ಅದಕ್ಕಾಗಿ ಜನರಿಗೆ 'ಸ್ವ' ಅಂದರೆ ತನ್ನತನದ ಉಪದೇಶ ಮಾಡಿದರು. ಪರಕೀಯರ ಗುಣಾವಗುಣಗಳನ್ನೆಲ್ಲ ಅನು ಕರಿಸುವುದರಲ್ಲಿಯೇ ಉಬ್ಬಿಹೋದ ಮಂದಮತಿಗಳು ಲೋಕಮಾನ್ಯರ 'ತನ್ನ' ತನದ ಉಪದೇಶದ ವಿಪರೀತಾರ್ಥವನ್ನು ಮಾಡಿದರು. ಆದರೆ ಲೋ. ಟಿಳಕರು ಇಂತಹ ಯಾವ ಟೀಕೆಗಳಿಗೂ ಅಂಜಲಿಲ್ಲ. ಗಣೇ ಶೋತ್ಸವ, ಶಿವಾಜಿ ಪುಣ್ಯತಿಥಿ ಮೊದಲಾದ ರಾಷ್ಟ್ರೀಯ ಉತ್ಸವ ಗಳನ್ನು ಆರಂಭಿಸಿದರು. ಜನರಲ್ಲಿ ಸ್ವಧರ್ಮ-ಸ್ವದೇಶಗಳ ಅಭಿಮಾನವು ತಲೆದೋರುವಂತೆ ಮಾಡಿದರು. ೧೮೯೬ ನೆಯ ಇಸವಿಯ ಕಡುತರ ವಾದ ಬರಗಾಲದಲ್ಲಿ ಬಡಬಗ್ಗರಿಗೆ ಕಾಳುಕಡಿಗಳು ಸಿಕ್ಕುವಂತೆ ಬಹಳ ಪರಿಶ್ರಮ ಪಟ್ಟರು. ಅದೇ ವರ್ಷ ಮುಂಬೈ ಇಲಾಖೆಯಲ್ಲಿ ಪ್ಲೇಗಿನ ಹಾವಳಿಯಾಯಿತು. ಪ್ಲೇಗಿನ ಸಲುವಾಗಿ ಜನರು ಊರು ಬಿಟ್ಟು ಹೋಗಬೇಕೆಂದೂ ಪ್ಲೇಗ-ಮೈಲಿ ಚುಚ್ಚಿಸಿಕೊಳ್ಳಬೇಕೆಂದೂ ಆಗಿನ ಅಧಿಕಾರಿಗಳು ಅನೇಕ ಕ್ರೂರ ಅನ್ಯಾಯಗಳನ್ನು ಮಾಡಿದರು. ಲೋಕಮಾನ್ಯರು ಜನರಿಗೆ ತಿಳಿಹೇಳಿ ಊರು ಬಿಡಿಸುವುದಕ್ಕೆ ಅಧಿಕಾರಿ ಗಳಿಗೆ ನೆರವಾದರು. ಆದರೂ ಅವರ ಅನ್ಯಾಯದ ರೀತಿಗಳನ್ನು ಖಂಡಿಸಲು ಹಿಂಜರಿಯಲಿಲ್ಲ.

ಪ್ಲೇಗಿನ ಅಧಿಕಾರಿಗಳ ಬಲುಮೆ ಒತ್ತಾಯಗಳಿಂದ ತಲೆ ತಿರುಗಿದ ಒಬ್ಬನು ಇಬ್ಬರು ಯುರೋಪೀಯ ಮುಖ್ಯಾಧಿಕಾರಿಗಳಿಗೆ ಗುಂಡು ಹಾಕಿ ಸೇಡು ತೀರಿಸಿಕೊಂಡನು. ಬ್ರಿಟಿಶ ರಾಜ್ಯವು ಆರಂಭ

ವಾದ ಬಳಿಕ ಅಧಿಕಾರಿಗಳ ಅನ್ಯಾಯಕ್ಕಾಗಿ ಹೀಗೆ ಸೇಡು ತೀರಿಸಿಕೊಂಡ ಉದಾಹರಣವು ಇದೆ ಮೊದಲು. ಈ ಕೊಲೆಯು ಲೋ. ಟಿಳಕರಿಂದಲೆ ಆಯ್ತೆಂದು ಅಧಿಕಾರಿಗಳು ಕೂಗು ಎಬ್ಬಿಸಿದರು. ಆದರೆ ಅದು ಸಿದ್ಧವಾಗಲಿಲ್ಲ. ಶ್ರೀ. ಟಿಳಕರು ಕೇಸರಿ ಮುಖಾಂತರವಾಗಿ ಜನರಲ್ಲಿ ಹಬ್ಬಿಸಿದ ಅಸಂತೋಷವೇ ಕೊಲೆಗೆ ಪ್ರವರ್ತಕವಾಗಿರಲಿಕ್ಕೆಬೇಕೆಂದೂ ತರ್ಕಗಳು ಆರಂಭವಾದವು. ಕೇಸರಿಯೊಳಗಿನ ಲೇಖಗಳ ಆಧಾರದ ಮೇಲೆ ರಾಜದ್ರೋಹದ ಆರೋಪವಿಡಲ್ಪಟ್ಟು ೧೮ ತಿಂಗಳ ಶಿಕ್ಷೆಯೂ ಆಯ್ತು. ಆದರೆ ಶಿಕ್ಷೆಯಿಂದ ಶ್ರೀ. ಟಿಳಕರು ಲೋಕಮಾನ್ಯ ಟಿಳಕರಾದರು. ರಾಷ್ಟ್ರೀಯ ಪಕ್ಷದ ಆದಿ ಗುರುಗಳಾದರು. ಏಕೆಂದರೆ ಅಖಿಲ ಹಿಂದುಸ್ತಾನದಲ್ಲಿ ರಾಜದ್ರೋಹದ ಆರೋಪದಿಂದ ಕಾರಾಗೃಹವಾಸವನ್ನು ಅನುಭವಿಸಬೇಕಾದ ಮೊಟ್ಟಮೊದಲನೆಯ ಮಾನವು ಲೋ. ಟಿಳಕರಿಗಲ್ಲದೆ ಅನ್ಯರಿಗಿಲ್ಲ.

ಲೋ. ಟಿಳಕರು ಕಾರಾಗೃಹದಿಂದ ಮರಳಿ ಬಂದ ಬಳಿಕ "ಪುನಶ್ಚ ಹರಿಃ ಓಂ" ಎಂದು ಮತ್ತೆ ಲೋಕಸೇವೆಗೆ ಸೊಂಟ ಕಟ್ಟಿದರು. ಈ ಅವಧಿಯಲ್ಲಿ ಲೋಕಮಾನ್ಯರು ಮಿತ್ರಕಾರ್ಯವೆಂದು ವಹಿಸಿದ ಶ್ರೀ. ಬಾಬಾ ಮಹಾರಾಜ ಎಂಬ ಒಬ್ಬ ಶ್ರೀಮಂತ ಗೃಹಸ್ಥನ ಆಸ್ತಿಯ ನ್ಯಾಯದಲ್ಲಿ ಅವರ ಧನ-ಕಾಲ-ಶಕ್ತಿಗಳು ಬಹಳ ಹಾಳಾದವು. ಸರಕಾರಿ ಅಧಿಕಾರಿಗಳೂ ಇದರಲ್ಲಿ ಲೋ. ಟಿಳಕರು ಇನ್ನಿಷ್ಟು ತೊಂದರೆಗಳಿಗೆ ಒಳಗಾಗುವಂತೆ ಪ್ರಯತ್ನ ಮಾಡಿ ನೋಡಿದರು. ಆದರೆ ಅವಾವುಗಳಿಗೂ ಯಶಸ್ಸು ಸಿಕ್ಕಲಿಲ್ಲ. ಲೋಕಮಾನ್ಯರಿಗೆ ಈ ಮಿತ್ರಕಾರ್ಯದಲ್ಲಿ ಕಲ್ಪನಾತೀತ ಸಂಕಷ್ಟಗಳನ್ನು ಅನುಭವಿಸಬೇಕಾದರೂ ಅವರು ತಾವು ಕೈಕೊಂಡ ಸಾರ್ವಜನಿಕ ಕೆಲಸಗಳಾವುವನ್ನೂ ದುರ್ಲಕ್ಷಿಸಲಿಲ್ಲ. ಲೋ. ಟಿಳಕರಿಗೆ ಆಗಿನ ಕಾಲದಲ್ಲಿ ಇದ್ದ ವಿಪರೀತ ಪರಿಸ್ಥಿತಿ ಕಷ್ಟನಷ್ಟಗಳನ್ನು ನೆನಿಸಿದರೆ ಎದೆ ನಡುಗುತ್ತದೆ. ಇಂತಹ ತೊಂದರೆಗಳಿಂದ ನಿರಾಶವಾಗದೆ ಇಮ್ಮಡಿ ಉತ್ಸಾಹ ಧೈರ್ಯ

ಗಳಿಂದ ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುತ್ತಿದ್ದ ಅವರ ಆಂತರೀಕ ಸ್ಫೂರ್ತಿಯು ಅಗಾಧವಾದುದು ಅನ್ಯಾದೃಶವಾದುದು ಎಂಬುದಕ್ಕೆ ಸಂದೇಹವಿಲ್ಲ.

ಆಗ ಸರಕಾರದ ಅವಕೃಪೆಗೆ ಪಾತ್ರರಾದ ರಾಷ್ಟ್ರಭಕ್ತರಿಗೆ ಈಗಿನಂತೆ ಜನಸಾಮಾನ್ಯರ ಬೆಂಬಲವಿದ್ದಿಲ್ಲ. ಲೋಕಮಾನ್ಯರ ಕಾರ್ಯದ ಬಗ್ಗೆ ಜನರಲ್ಲಿ ತುಂಬಾ ಆದರ ಪ್ರೀತಿಗಳಿದ್ದರೂ ಅದು ಕೇವಲ ಮನಸಿನೊಳಗೆ. ಲೋ. ಟಿಳಕರನ್ನು ದೇವರಂತೆ ಕಂಡಂತೆ ದೂರಿನಿಂದಲೆ ನಮಸ್ಕರಿಸುವವರಲ್ಲದೆ ಹತ್ತಿರ ಹೋಗಿ ಅವರ ಕಾರ್ಯದಲ್ಲಿ ಪ್ರತ್ಯಕ್ಷ ಸಹಾಯ ಮಾಡುವವರು ತೀರ ಕಡಿಮೆ. ಅರಸಾಳುಗಳಂತೂ ಲೋಕಮಾನ್ಯರನ್ನು ಎಷ್ಟು ರೀತಿಯಿಂದ ಪೀಡಿಸುವುದು ಸಾಧ್ಯವಿತ್ತೊ ಅಷ್ಟು ಬಗೆಗಳಿಂದ ಕಾಡಿಸಲಿಕ್ಕೆ ಹೊಂಚು ಹಾಕಿಕೊಂಡೆ ಕುಳಿತಿದ್ದರು. ರಾಷ್ಟ್ರೀಯ ಮಹಾ ಸಭೆಯಲ್ಲಿ ಲೋ. ಟಿಳಕರಿಗೆ ಎಡೆ ದೊರೆಯಬಾರದೆಂದು ಅದರ ಸೂತ್ರದಾರರು ಸತತವಾಗಿ ಪ್ರಯತ್ನಗಳನ್ನು ನಡಿಸಿದ್ದರು. ಲೋಕಹಿತದ ಸಲುವಾಗಿ ಹಗಲಿರಳೂ ಸವೆದು ಸರಕಾರದ ಅವಕೃಪೆಯನ್ನೂ ಲೆಕ್ಕಿಸದೆ ಕಾರಾಗಾರದ ಯಾತನೆಗಳನ್ನೂ ಅನುಭವಿಸಿ ಹಿಮಾಲಯ ಪರ್ವತದಂತೆ ಅವಿಚಲಿತ ಶ್ರದ್ಧೆಯಿಂದ ಮತ್ತೆ ಲೋಕಸೇವೆಯನ್ನೆ ನಡಿಸಿದ ಲೋ. ಟಿಳಕರಿಗೆ ರಾಷ್ಟ್ರೀಯ ಮಹಾ ಸಭೆಗಳಲ್ಲಿ "ಮುಂದಕ್ಕೆ ಬನ್ನಿರಿ, ಇಲ್ಲಿ ಕುಳಿತುಕೊಳ್ಳಿರಿ" ಎಂದು ಪ್ರೀತಿ ವಿಶ್ವಾಸಗಳಿಂದ ಕರೆಯುವವರು ಸಹ ಯಾರೂ ಇದ್ದಿಲ್ಲ. ಸ್ವಾಮಿ ಶ್ರದ್ಧಾನಂದರು ತಾವು ಕಂಡ ಇಂತಹ ಒಂದು ಪ್ರಸಂಗವನ್ನು ವಿವರಿಸಿದ್ದಾರೆ. ಲೋಕಮಾನ್ಯರು ೧೯೧೬ರಲ್ಲಿ ಲಖನೌ ಕಾಂಗ್ರೆಸ್ಸಿಗೆ ಹೋದಾಗ ಪ್ರೇಕ್ಷಕರೂ ಪ್ರತಿನಿಧಿಗಳೂ ಅವರನ್ನು ಅತ್ಯಂತ ಆದರ ಪ್ರೀತಿಗಳಿಂದ ಜಯಜಯಕಾರದೊಡನೆ ಸತ್ಕರಿಸಿದರು; ಅಖಿಲ ಭಾರತವರ್ಷದ ಪ್ರಮುಖರು ಕುಳಿತುಕೊಂಡ ವ್ಯಾಸಪೀಠವನ್ನಲಂಕರಿಸಲು ಜನಸಮುದಾಯವು ಒತ್ತಾಯಪಡಿಸ

ಲಾರಂಭಿಸಿತು. ಆದರೆ ಆಗಿನ ರಾಷ್ಟ್ರೀಯ ಸಭೆಯ ಸೂತ್ರ ಚಾಲಕರಾದ ಮಂದ ಪಕ್ಷದ ಮುಂದಾಳುಗಳು ಲೋ. ಟಿಳಕರ ನೆರಳಿಗೂ ಹೆದರಿ ಅವರನ್ನು ಹತ್ತಿರಕ್ಕೆ ಸಹ ಕರೆಯಲಿಲ್ಲ. ಲೋ. ಟಿಳಕರು ಜನರ ಉತ್ಸಾಹ ಅಥವಾ ವಿರೋಧಿಗಳ ಅನಾದರಗಳೆರಡನ್ನೂ ಅಷ್ಟೇ ಬಗೆದು ತಮ್ಮ ಭಾಗದ ಪ್ರತಿನಿಧಿಗಳ ವಿಭಾಗದಲ್ಲಿ ಒಬ್ಬ ಸಾಮಾನ್ಯ ಮನುಷ್ಯನಂತೆ ಶಾಂತವಾಗಿ ಹೋಗಿ ಕುಳಿತುಕೊಂಡರು. ಲೋ. ಟಿಳಕರಿಗೆ ಇಂತಹ ಎಲ್ಲ ಪ್ರಸಂಗಗಳಲ್ಲಿಯೂ ಭಗವದ್ಗೀತೆಯ ಉಪದೇಶವೆ ಮಾರ್ಗದರ್ಶಕವಾಗಿತ್ತು. ಅನಾಸಕ್ತಿಯಿಂದ, ಫಲಾಶಾ ವಿರಹತರಾಗಿ ಕರ್ತವ್ಯವನ್ನು ಮಾಡುತ್ತಿರಬೇಕೆಂಬ ಯೋಗಸಾಧನವನ್ನೇ ನಡಿಸಿದ್ದರು.

ವರ್ಷದಲ್ಲಿ ಒಂದು ಸಾರೆ ಸಭೆ ಮಾಡಿ ಕೆಲವು ನಿರ್ಣಯಗಳನ್ನು ಮಾಡುವುದರಿಂದ ಕೆಲಸವು ಕೈಗೂಡಲಾರದು; ರಾಷ್ಟ್ರೀಯ ಸಭೆಯ ಕೆಲಸವು ಇಡಿ ವರ್ಷದಲ್ಲೆಲ್ಲ ಸತತವಾಗಿ ಸಾಗಬೇಕೆಂದು ಲೋಕಮಾನ್ಯರ ಅಪೇಕ್ಷೆಯಿತ್ತು. ಲೋಕಮತದ ಬೆಂಬಲವಿಲ್ಲದೆ ಸರಕಾರವು ನಮ್ಮ ಯಾವ ಬೇಡಿಕೆಗಳನ್ನೂ ಮನ್ನಿಸಲಾರದು. ಆದಕಾರಣ ಜನಜಾಗೃತಿಯನ್ನು ಮಾಡುವುದು ಅವಶ್ಯಕವೆಂದು ಪ್ರತಿಪಾದಿಸುತ್ತಿದ್ದರು. ಮತ್ತು ಅದರ ಸಲುವಾಗಿಯೇ ರಾಷ್ಟ್ರೀಯ ಉತ್ಸವ, ಸ್ವದೇಶಿ ಚಳವಳಿ ಮೊದಲಾದ ಆಂದೋಲನಗಳನ್ನು ಆರಂಭಿಸಿದ್ದರು. ಆದರೆ ಇದಾವುದೂ ಮಂದ ಪಕ್ಷಿಗಳ ಮನಸಿಗೆ ಬರಲಿಲ್ಲ. ಸರಕಾರದ ಸಂಗಡ ಸಮವಿನಯದಿಂದ ನಡಕೊಂಡು ಅವರಿಗೆ ನಮ್ಮ ದುಃಖಗಳನ್ನು ತಿಳಿಸಿದರೆ ಅವರು ಅವುಗಳನ್ನು ನಿವಾರಿಸುವರೆಂದು ಹೇಳುತ್ತಿದ್ದರು. ಆದರೆ ಆ ಮರುಳರ ದುರ್ದೈವದಿಂದ ಲಾರ್ಡ ಕರ್ಝನರ ಆಳಿಕೆಯಲ್ಲಿ ಬಂಗಾಲದ ಎರಡು ವಿಭಾಗಗಳು ಮಾಡಲ್ಪಟ್ಟವು. ಪ್ರಜಾಕ್ಷೋಭಕ್ಕೆ ಆರಂಭವಾಯಿತು. ರಾಷ್ಟ್ರೀಯ ಸಭೆಯಲ್ಲಿ ಮಂದ ಪಕ್ಷವು ಹಿಂದೆ ಬಿದ್ದು ಲೋ. ಟಿಳಕರ ತರುಣ

ಪಕ್ಷವು ಪ್ರಬಲವಾಗಲಾರಂಭಿಸಿತು. ೧೯೦೫ ರಲ್ಲಿ ಕಾಶಿಯಲ್ಲಾದ ರಾಷ್ಟ್ರೀಯ ಸಭೆಯೊಳಗೆ ಈ ಮಾತು ಸ್ಪಷ್ಟವಾಗಿ ನಿದರ್ಶನಕ್ಕೆ ಬಂದಿತು. ಆ ವರ್ಷ ಇಂಗ್ಲೆಂಡಿನಿಂದ ಹಿಂದುಸ್ಥಾನವನ್ನು ಸಂದರ್ಶಿಸ ಲಿಕ್ಕೆ ಬಂದಯುವರಾಜರ ಸ್ವಾಗತವನ್ನು ರಾಷ್ಟ್ರೀಯಸಭೆಯವರು ಮಾಡಬಾರದೆಂದು ಸೂಚನೆಯನ್ನು ಲೋ. ಟಿಳಕರೂ, ಲಜಪತ ರಾಯರೂ ತರತಕ್ಕವರಿದ್ದರು. ಆದರೆ ಅಧ್ಯಕ್ಷರಾದ ನಾ. ಗೋಖಲೆ ಯವರು ಶ್ರೀ. ಲಾಲಾಜಿಯವರನ್ನು ಒಡೆದುಕೊಂಡದ್ದರಿಂದ ಈ ಮಾತು ಅಷ್ಟು ಸಾಧ್ಯವಾಗಲಿಲ್ಲ. ಆದರೂ ಬಂಗಾಲಿಗಳು ಆಚರಣ ದಲ್ಲಿ ತಂದ ಬ್ರಿಟಿಶ ಸರಕಿನ ಬಹಿಷ್ಕಾರದ ಚಳವಳಿಗೆ ರಾಷ್ಟ್ರೀಯ ಸಭೆಯಿಂದ ಮಾನ್ಯತೆ ದೊರೆತಿತು. ೧೯೦೬ ಇಸವಿಯ ಕಲಕತ್ತಾ ಕಾಂಗ್ರೆಸ್ಸಿನಲ್ಲಂತೂ ಟಿಳಕರ ತರುಣ ಪಕ್ಷದ ಸಂಪೂರ್ಣ ವಿಜಯ ವಾಯ್ತು. ಸ್ವರಾಜ್ಯವೆ ಹಿಂದುಸ್ಥಾನದ ಧ್ಯೇಯವೆಂದು ನಿಶ್ಚಿತ ವಾಯ್ತು. ಸ್ವರಾಜ್ಯಸಾಧನೆಗೆ ರಾಷ್ಟ್ರೀಯ ಶಿಕ್ಷಣ ಸ್ವದೇಶಿ ಮತ್ತು ಬಹಿಷ್ಕಾರಗಳೆ ಸಾಧನಗಳೆಂದೂ ಗೊತ್ತಾಯಿತು.

ತರುಣ ಪಕ್ಷದ ವಿಜಯವನ್ನು ಕಂಡು ಮಂದ ಪಕ್ಷದವರು ಗಾಬರಿಗೊಂಡರು. ಸ್ವದೇಶಿ ಮತ್ತು ಬಹಿಷ್ಕಾರದ ಪ್ರಸಾರವು ದೇಶ ದಲ್ಲೆಲ್ಲ ನಡೆಯಿತು. ಅರಸಾಳುಗಳು ವಿವೇಕವನ್ನು ಬದಿಗಿರಿಸಿ ಅನ್ಯಾ ಯಗಳಿಗೆ ಆರಂಭಿಸಿದರು. 'ವಂದೇಮಾತರಂ' ಪದವನ್ನು ಹೇಳುವುದೂ ಅಪರಾಧವೆಂದು ಅಪ್ಪಣೆಗಳು ಹೊರಟವು! ಸರಕಾರದ ಒಲವು ನೋಡಿ ಕೊಂಡು ಚಳವಳಿ ಮಾಡಬೇಕೆಂಬ ಮಂದ ಪಕ್ಷೀಯರು ಮುಂದಿನ ವರ್ಷದ ಅಂದರೆ ೧೯೦೭ ನೆಯ ಇಸವಿಯ ಕಾಂಗ್ರೆಸ್ಸಿನಲ್ಲಿ ಕಲಕತ್ತಾ ಕಾಂಗ್ರೆಸ್ಸಿನಲ್ಲಿ ಟಿಳಕ ಪಕ್ಷದವರು ಪಾಸ ಮಾಡಿಕೊಂಡ ಸ್ವಾವಲಂಬ ನದ ಠರಾವುಗಳನ್ನು ತಿರುಗಿ ತಕ್ಕೊಳ್ಳಬೇಕೆಂದು ಕುಯುಕ್ತಿಗಳಿಗೆ ಆರಂಭಿಸಿದರು.

೧೯೦೭ ರಲ್ಲಿ ರಾಷ್ಟ್ರೀಯ ಸಭೆಯು ನಾಗಪೂರಕ್ಕೆ ಸೇರ ಬೇಕೆಂದು ಗೊತ್ತಾಗಿತ್ತು. ಆದರೆ ಮಧ್ಯಪ್ರಾಂತದಲ್ಲಿ ಲೋ. ಟಿಳಕರ

ಪಕ್ಷದವರೇ ಹೆಚ್ಚಾಗಿರುವುದರಿಂದ ಸರ ಫಿರೋಜಶಹಾ ಮೇಥಾ ಇವರು ತಮ್ಮ ಅನುಯಾಯಿಗಳ ಪ್ರಾಬಲ್ಯವಿರುವ ಸುರತನಗರದಲ್ಲಿ ಮಹಾ ಸಭೆಯನ್ನು ಸೇರಿಸಿದರು. ಅಲ್ಲಿ ಜಗಳಗಳಾದುವು. ತರುಣ ಪಕ್ಷದವರು ಬಾರದಂತೆ ಹೊಸ ನಿರ್ಬಂಧಗಳನ್ನು ಹಾಕಿ ಮಂದ ಪಕ್ಷದವರು ಸರಕಾರಕ್ಕೆ ಹೆದರಿ ಸ್ವಾಭಿಮಾನದ ಮಾರ್ಗವನ್ನು ತ್ಯಜಿಸಿದರು; ರಾಷ್ಟ್ರೀಯವೃತ್ತಿಯ ತರುಣರನ್ನು ತಮ್ಮಿಂದ ದೂರ ನಿಲ್ಲಿಸಿ ಸರಕಾರದ ಹೊಡೆತಕ್ಕೆ ಈಡು ಮಾಡಿದರು. ತಮ್ಮ ರಾಜನಿಷ್ಠೆಯ ಪ್ರದರ್ಶನ ಮಾಡಿದರು. ಇತ್ತ ಎಷ್ಟೋ ತರುಣರಿಗೆ ಲೋ. ಟಿಳಕರ ಈ ಸ್ವಾವಲಂಬನದ ಮಾರ್ಗವೂ ಶೀಘ್ರ ಫಲದಾಯಿಯಾಗಿ ತೋರಲಿಲ್ಲ. ಅಧಿಕಾರಿಗಳ ಅನ್ಯಾಯಗಳೂ ಹೆಚ್ಚಿದ್ದರಿಂದ ಇನ್ನಿಷ್ಟು ಅವರ ತಲೆ ತಿರುಗಿತು. ಅಧಿಕಾರಿಗಳ ಕೊಲೆಗೆ ಮೊದಲಾಯಿತು. ಲೋಕಮಾನ್ಯರಿಗೆ ಈ ಮಾರ್ಗವು ದೇಶದ ಸದ್ಯಸ್ಥಿತಿಯಲ್ಲಿ ಏನೂ ಲಾಭದಾಯಕವೆಂದು ತೋರಲಿಲ್ಲ. ಆದುದರಿಂದ ತಾವು ಆ ದಾರಿಯನ್ನು ಹಿಡಿಯದಿದ್ದರೂ ಸರಕಾರಕ್ಕೆ ಮಾತ್ರ 'ಈಗ ಹಾರುವ ಬಾಂಬುಗಳಿಂದ ಎಚ್ಚರಗೊಳ್ಳಿರಿ' 'ಬಾಂಬುಗಳ ರಹಸ್ಯವೇನೆಂಬುದನ್ನು ತಿಳಿದುಕೊಂಡು ಈ ಅಸಂತೋಷದ ಬುಡಕ್ಕಿರುವ ಆ ಮೂಲ ಕಾರಣವನ್ನೇ ತೆಗೆದು ಹಾಕಿಬಿಡಿರಿ' ಎಂದು ಸ್ಪಷ್ಟವಾಗಿ ಎಚ್ಚರ ಕೊಡುತ್ತಿದ್ದರು. ಲೋ. ಟಿಳಕರು ಹೀಗೆ ಬರೆಯುವುದು ಬಾಂಬುಗಳ ಅತ್ಯಾಚಾರಕ್ಕೆ ಪ್ರೋತ್ಸಾಹಕವಾಗಿದೆಯೆಂದು ಸರಕಾರದವರು ಆರು ವರ್ಷಗಳ ಕಠೋರ ಶಿಕ್ಷೆಯನ್ನು ಅವರಿಗೆ ವಿಧಿಸಿದರು.

ಲೋಕಮಾನ್ಯರ ಹಿಂದೆ ದೇಶದಲ್ಲೆಲ್ಲ ಮತ್ತೆ ಸ್ಮಶಾನಶಾಂತಿಯು ನೆಲೆಗೊಂಡಿತು. ಜನರು ದಿಙ್ಮೂಢರಾಗಿ ಲೋ. ಟಿಳಕರು ಎಂದು ಮರಳಿ ಬರುವರೊ ಎಂದು ಕಾಲನಿರೀಕ್ಷಣೆ ಮಾಡಹತ್ತಿದರು. ರಾಜಕೀಯ ಕ್ಷೇತ್ರದಲ್ಲಿ ಸೇರುವುದಿಲ್ಲೆಂದು ವಚನ ಕೊಟ್ಟರೆ ಲೋಕಮಾನ್ಯರನ್ನು ಬಂಧಮುಕ್ತ ಮಾಡಲಿಕ್ಕೆ ಸರಕಾರವು ಸಿದ್ಧವಿತ್ತು.

ಆದರೆ ಲೋಕಮಾನ್ಯರು ಮಾತ್ರ ಆ ಮಾತಿಗೆ ಸರ್ವಥಾ ಒಪ್ಪಲಿಲ್ಲ. ಸೆರೆಮನೆಯಲ್ಲಿ ಗೀತೆಯ ರಹಸ್ಯವನ್ನು ಬರೆವುದನ್ನು ಕೈಕೊಂಡರು; ಜರ್ಮನ್, ಫ್ರೆಂಚ, ಮತ್ತು ಪಾಲಿ ಭಾಷೆಗಳನ್ನು ಹೊಸದಾಗಿ ಕಲಿತರು. ಗೀತಾರಹಸ್ಯದ ಮೂಲಕ ಮನುಷ್ಯನು ಬ್ರಾಹ್ಮೀ ಸ್ಥಿತಿಯಲ್ಲಿದ್ದು ಲೋಕೋದ್ಧಾರಕ್ಕಾಗಿ ಹೇಗೆ ಕರ್ಮವನ್ನಾಚರಿಸಬೇಕೆಂಬುದನ್ನು ಹೇಳುವುದೇ ಅವರ ಮುಖ್ಯೋದ್ದೇಶವಾಗಿತ್ತು. ಗೀತೆಯ ಉಪದೇಶವು ಮನಸಿನಲ್ಲಿ ಬಿಂಬಿಸಿದರೆ ಹಿಂದೀ ಜನರ ಉದ್ಧಾರವಾಗಲಿಕ್ಕೆ ಅವಕಾಶವೇ ಇಲ್ಲವೆಂದು ಲೋಕಮಾನ್ಯರ ನಂಬುಗೆಯಾಗಿತ್ತು. ಆದಕಾರಣ ಅವರು ತಮ್ಮ ಕಾರಾಗ್ರುಹ ವಾಸದಲ್ಲಿಯೂ ಲೋಕೋದ್ಧಾರ ಚಿಂತೆಯಿಂದಲೇ ವ್ಯಾಪ್ತರಾಗಿ ಅಧ್ಯಯನ ಗ್ರಂಥಲೇಖನದ ಕಾರ್ಯವನ್ನು ಬಿಟ್ಟೂಬಿಡದೆ ನಡಿಸಿದ್ದರು.

೧೯೧೪ರಲ್ಲಿ ಶಿಕ್ಷೆಯ ಸಂಪೂರ್ಣ ಅವಧಿಯು ಮುಗಿದ ಬಳಿಕ ಬಿಡುಗಡೆಯಾಯಿತು. ಬಿಡುಗಡೆಯಾದ ಬಳಿಕ ದೇಶಸ್ಥಿತಿಯ ಸಮಗ್ರ ನಿರೀಕ್ಷಣೆ ಮಾಡಿ ಹೋಮರೂಲಿನ ಚಳವಳಿಗೆ ಕೈಯಿಕ್ಕಿದರು. ಸ್ವರಾಜ್ಯದ ವಿಚಾರವನ್ನು ಜನರಿಗೆ ತಿಳಿಸಿ ಕೊಡುವುದಕ್ಕಾಗಿ ಕೊಟ್ಟ ಒಂದು ಉಪನ್ಯಾಸದಲ್ಲಿ ರಾಜದ್ರೋಹವಿರುವುದೆಂದು ಪೋಲೀಸರು ಖಟ್ಲೆ ಹಾಕಿದರು. ೧೦೦೦೦ ರೂ. ಗಳ ಸ್ವಂತ ಜಾಮೀನು ಮತ್ತು ೪೦೦೦೦ ರೂ. ಗಳ ಇಬ್ಬರು ಜಾಮೀನದಾರರನ್ನು ಕೊಡಬೇಕೆಂದು ಕೇಳಿದರು. ಮ್ಯಾಜಿಸ್ಟ್ರೇಟರು ಇದರಲ್ಲಿ ಲೋ. ಟಿಳಕರಿಗೆ ಅಪರಾಧಿಯೆಂದೂ ನಿರ್ಣಯಿಸಿದ್ದರೂ ಹೈಕೋರ್ಟಿನಲ್ಲಿ ಲೋಕಮಾನ್ಯ ಟಿಳಕರು ನಿರ್ದೋಷಿಯೆಂದು ತೀರ್ಪು ಸಿಕ್ಕಿತು. ಸ್ವರಾಜ್ಯ ಸಂಘಗಳು ದೇಶದಲ್ಲೆಲ್ಲ ಸ್ಥಾಪಿತವಾಗಿ ಜನಜಾಗೃತಿಯ ಕಾರ್ಯಕ್ಕೆ ಆರಂಭವಾಯಿತು. ರಾಷ್ಟ್ರೀಯ ಪಕ್ಷದವರು ಕಾಂಗ್ರೆಸ್ಸಿನಲ್ಲಿಯೂ ಸೇರಿ ಅದನ್ನು ಕೈವಶ ಮಾಡಿಕೊಂಡರು. ಮಹಾ ಯುದ್ಧದಿಂದ ಬದಲಾದ ಪರಿಸ್ಥಿತಿಯ ಲಾಭ ಪಡೆದು ಬೇಗನೆ ಸ್ವರಾಜ್ಯದ ಹಕ್ಕುಗಳನ್ನು

ದೊರಕಿಸಿಕೊಳ್ಳಬೇಕೆಂದು ಚಳವಳಿಗೆ ಬಹಳ ಜೋರು ಬಂದಿತ್ತು. ೧೯೧೬ ನೆಯ ಇಸವಿಯಲ್ಲಿ ಲಖನೌ ಕಾಂಗ್ರೆಸ್ಸಿನೊಳಗೆ ಹಿಂದೂ-ಮುಸಲ್ಮಾನರ ಒಕ್ಕಟ್ಟು ಲೋಕಮಾನ್ಯರ ಜಾಣತನದಿಂದಲೇ ಆಯಿತು. ಇವೆಲ್ಲ ಪ್ರಯತ್ನಗಳ ಫಲವೆ ಮಾಂಟೆಗ್ಯು ಚೆಲ್ಮ್ಸ್ ಫರ್ಡ ಸುಧಾರಣೆಗಳು. ೧೯೨೦ ನೆಯ ಸುಮಾರಕ್ಕೆ ಹಿಂದುಸ್ತಾನದಲ್ಲಿ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ ಸುಧಾರಣಗಳು ಆರಂಭವಾದವು. ಇವುಗಳ ಆರಂಭವೆ ಲೋಕಮಾನ್ಯರ ಅವತಾರ ಸಮಾಪ್ತಿ ಕಾಲವೆಂದು ಹೇಳಬಹುದು.

ಜಾಲಿಯನವಾಲಾಬಾಗ ಮತ್ತು ಖಿಲಾಫತ ಪ್ರಕರಣಗಳಿಂದ ಉಂಟಾದ ವಿಶೇಷ ಪರಿಸ್ಥಿತಿಯ ಸಲುವಾಗಿ ಅಸಹಕಾರವನ್ನು ಆರಂಭಿಸಬೇಕೆಂದು ಮಹಾತ್ಮಾಜಿಯವರೂ ಅಲ್ಲೀ ಬಂಧುಗಳೂ ಪ್ರಯತ್ನಗಳನ್ನು ನಡಿಸಿದ್ದರು. ಇದಕ್ಕಾಗಿ ಲೋಕಮಾನ್ಯರ ಸಲಹೆ ಕೇಳಿದಾಗ ನೀವು ಮಾಡುವ ಯಾವದೇ ಚಳವಳಿಯು ನನ್ನಕಿಂತ ಉಗ್ರವಾಗಿರಲಾರದು. ಆದಕಾರಣ ನಾನು ನಿಮಗೆ ಯಾವಾಗಲೂ ಸಹಾಯಕನಿದ್ದೇನೆಂದು ತಿಳಿಯಿರಿ ಎಂಬುದಾಗಿ ಹೇಳುವ ಉಲ್ಲೇಖಗಳಿವೆ. ನೀವೆಲ್ಲ ಒಮ್ಮನಸಿನಿಂದ ನಿಶ್ಚಯಿಸಿದುದಕ್ಕೆ ನನ್ನ ಸಮ್ಮತಿಯಿದೆ. ವ್ಯಾವಹಾರಿಕ ಭಾಗದ ಒಂದೆರಡು ಮಾತುಗಳಲ್ಲಿ ಸ್ವಲ್ಪ ಮತಭೇದವಾದರೂ ತತ್ವತಃ ನಾನು ನಿಮ್ಮೊಡನೆಯಿದ್ದೇನೆಂದು ಅವರು ಅಲ್ಲೀ ಬಂಧುಗಳು ಡಾ. ಅನಸಾರಿ ಪ್ರಭೃತಿಗಳಿಗೆ ಆಶ್ವಾಸನವನ್ನಿತ್ತಿದ್ದರು. ಆದರೆ ಲೋಕಮಾನ್ಯರಿಗೆ ಆಕಸ್ಮಿಕವಾಗಿ ಜ್ವರ ಬಂದು ೧೯೨೦ ಆಗಸ್ಟ ೧ ನೆಯ ತಾರೀಖಿಗೆ ತೀರಿಕೊಂಡರು. ಲೋಕಮಾನ್ಯರು ಅದ್ವಿತೀಯ ಮಹಾಪುರುಷರು. ಅವರಲ್ಲಿ ಧೈರ್ಯ, ದೂರ ದೃಷ್ಟಿ, ಅವಿಚಲ ಶ್ರದ್ಧೆಗಳೊಡನೆ ಅಗಾಧವಾದ ಬುದ್ಧಿಸಾಮರ್ಥ್ಯವೂ ಇತ್ತು. ಯಾವದೇ ಹೊಸ ವಿಷಯವಿರಲಿ ಅದನ್ನು ೪-೬ ದಿನಗಳಲ್ಲಿ ಸಂಪೂರ್ಣವಾಗಿ ಅರಿತುಕೊಂಡು ಆ ವಿಷಯದಲ್ಲಿ ನಿಷ್ಣಾತನಾದ ಯಾವದೇ

ಮನುಷ್ಯನೊಡನೆ ಅವರು ಪ್ರತಿಭಟಿಸಲು ಸಮರ್ಥರಾಗುತ್ತಿದ್ದರು. ಕೇಸರಿ ಪತ್ರಿಕೆಯ ಸಂಪಾದಕರಾಗಿದ್ದಾಗ ಅವರಿಗೆ ಇಂತಹ ಪ್ರಸಂಗಗಳು ಎಷ್ಟೋ ಬಂದಿದ್ದವು. ಕಾಲೇಜಿನಲ್ಲಿ ಪ್ರೊಫೆಸರರಾಗಿದ್ದಾಗ ಸಹ ಲೋಕಮಾನ್ಯರ ವಿವಿಧ ವಿಷಯಗಳೊಳಗಿನ ಜಾಣ್ಮೆಯನ್ನು ಕಂಡು ವಿದ್ಯಾರ್ಥಿಗಳೂ ಸಹಕಾರಿಗಳೂ ಬೆರಗಾಗುತ್ತಿದ್ದರು. ಆರ್ಯರ ಮೂಲಸ್ಥಾನ, ವೇದಕಾಲ, ವೇದಾಂಗ ಜ್ಯೋತಿಷ ಮತ್ತು ಗೀತಾರಹಸ್ಯಗಳು ಇವರ ಆಳವಾದ ಅಭ್ಯಾಸ, ಸೂಕ್ಷ್ಮ ಬುದ್ಧಿ, ವಿಶಾಲವಾದ ವಾಚನಗಳಿಗೆ ಸಾಕ್ಷಿಯಾಗಿವೆ. ವೇದಕಾಲ ನಿರ್ಣಯದ ಗ್ರಂಥವನ್ನೋದಿ ಅಮೇರಿಕೆಯ ವಿದ್ವಾಂಸನೊಬ್ಬನು ಆಶ್ಚರ್ಯಚಕಿತನಾಗಿ ಹಿಂದುಸ್ತಾನದ ಒಬ್ಬ ಕರಿಯ ಮನುಷ್ಯನು ಇಂತಹ ಸರ್ವೋತ್ಕೃಷ್ಟವಾದ ಗ್ರಂಥವನ್ನು ಬರೆಯಬಲ್ಲನೆಂದು ನಾನೆಂದೂ ತಿಳಿದಿರಲಿಲ್ಲ ಎಂದು ಉದ್ಗಾರಗಳನ್ನು ತೆಗೆದಿದ್ದಾನೆ. ಹಿಂದುಸ್ತಾನವನ್ನು ನೋಡಲಿಕ್ಕೆ ಬಂದ ಒಬ್ಬ ಪಶ್ಚಿಮ ದೇಶದ ಪ್ರವಾಸಿ ವಿದ್ವಾಂಸನಿಗೆ "ಈ ದೇಶದಲ್ಲಿ ನೀವು ನೋಡಿದುದೇನು?" ಎಂದು ಕೇಳಲಾಗಿ 'ಆಗ್ರಾದ ತಾಜಮಹಾಲು ಮತ್ತು ಟಿಳಕರ ಬುದ್ಧಿವೈಭವ' ಎಂದು ಹೇಳಿದನು. ಲೋಕಮಾನ್ಯರು ಬರಿ ಲೇಖನದ ಕಾರ್ಯವನ್ನೆ ಕೈಕೊಂಡಿದ್ದರೂ ಅವರು ಜಗತ್ತಿಗೆ ಬೆರಗುಗೊಳಿಸುವ, ಲೋಕಕಲ್ಯಾಣಕಾರಿಯಾದ ಅನೇಕ ಉದ್ಗ್ರಂಥಗಳನ್ನು ನಿರ್ಮಿಸಬಹುದಾಗಿತ್ತು. ಆದರೆ ಈ ಪರಕೀಯ ಸರಕಾರವು ಇರುವದರಿಂದ ಆ ಉದ್ಗ್ರಂಥಗಳು ಬೆಳಕನ್ನು ಕಾಣದೆ ಜಗತ್ತಿನ ಅಪಾರವಾದ ಹಾನಿಯಾಯಿತು.

ಲೋಕಮಾನ್ಯರ ಶಕ್ತಿಸರ್ವಸ್ವವು ಪರಕೀಯ ರಾಜರೊಡನೆ ಹೋರಾಡುವುದರಲ್ಲಿಯೆ ವೆಚ್ಚವಾಯಿತು; ತಾವು ಸ್ವಂತ ಅನೇಕ ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಂಡು ಅವುಗಳೊಡನೆ ಪ್ರತಿಭಟಿಸಿ ಸ್ವಜನರಿಗೆ ಸ್ವಾಭಿಮಾನ, ಧೈರ್ಯ, ಸ್ವಾತಂತ್ರ್ಯ ಪ್ರೀತಿಗಳ

ಪಾಠಗಳನ್ನು ಕಲಿಸುವುದರಲ್ಲಿ ಹೋಯಿತು. ದೇಶಕ್ಕಾಗಿ ಇವರಷ್ಟು ಸ್ವಾರ್ಥತ್ಯಾಗ ಮಾಡಿದವರೂ, ಸಂಕಟಗಳನ್ನು ಶಾಂತವಾಗಿ ಸಹಿಸಿದವರೂ ಇವರ ಮುಂಚೆ ಯಾರೂ ಆಗಲಿಲ್ಲ. ಜನರಿಗೆ ಪ್ರತಿಯೊಂದು ಮಾತಿನಲ್ಲಿಯೂ ಸ್ವದೇಶಿಯಾಗಲಿಕ್ಕೆ ಉಪದೇಶಿಸಿದವರು ಮೊಟ್ಟಮೊದಲು ಲೋಕಮಾನ್ಯರೆ. ಸ್ವಾಭಿಮಾನಿಯೂ ದೇಶದ ಉನ್ನತಿಯನ್ನು ಬಯಸುವವನೂ ಆದ ಪ್ರತಿಯೊಬ್ಬ ಭಾರತೀಯನಿಗೆ ಪ್ರಾತಃಸ್ಮರಣೀಯ ಮಹಾವಿಭೂತಿಗಳಲ್ಲಿ ಲೋಕಮಾನ್ಯರ ಪುಣ್ಯನಾಮವೂ ಒಂದಾಗಿದೆಯೆಂದು ಶ್ರೀ. ಅರವಿಂದ ಬಾಬುಗಳು ಹೇಳಿದ್ದು ಸಮರ್ಪಕವಾಗಿದೆ. "ಲೋಕಮಾನ್ಯರು ಇಲ್ಲದಿದ್ದರೆ ಹಿಂದುಸ್ತಾನವು ಇನ್ನೂ ಅಧಿಕಾರಿಗಳೆದುರಿಗೆ ಲಾಂಗೂಲ ಚಾಲನ ಮಾಡುತ್ತಲೂ ಧೂಳಿಯಲ್ಲಿ ಹೊಟ್ಟೆ ಹೊಸೆಯುತ್ತಲೂ ಅವರ ಅಡಿಗಳ ಮೇಲೆ ಹೊರಳಾಡುತ್ತಲೂ ದೀನ ಭಿಕ್ಷುಕ ವೃತ್ತಿಯಲ್ಲಿಯೇ ಇರಬಹುದಾಗಿತ್ತು. ಲೋಕಮಾನ್ಯರು ಹಿಂದೀ ಜನರಿಗೆ ತಲೆಯೆತ್ತಿ ಸ್ವಾಭಿಮಾನದಿಂದ ನಡೆಯಲಿಕ್ಕೆ ಕಲಿಸಿದರು. ಆದ್ದರಿಂದ ಇನ್ನು ಮುಂದೆ ಹಿಂದೂ ದೇಶವು ಬೇಗನೆ ಸ್ವರಾಜ್ಯವನ್ನು ಸಂಪಾದಿಸಿ ತನಗೆ ಅನಂತ ಉಪಕಾರ ಮಾಡಿದ ಮಹಾಪುರುಷನ ನೆನಪನ್ನು ಅದು ಎಂದೂ ಮರೆಯಲಿಕ್ಕಿಲ್ಲವೆಂದು ನಂಬಿದ್ದೇನೆ" ಎಂಬದಾಗಿ ಸೆಂಟನಿಹಾಲ ಸಿಂಗರು ಬರೆದುದು ಯಥೋಚಿತವಾಗಿದೆ.

# ಲೋಕಮಾನ್ಯರ ಗುಣಕಥನ

## ೧. ಧೈರ್ಯ, ಸ್ಥೈರ್ಯ ಮತ್ತು ಸಾಹಸ

ಲೋಕಮಾನ್ಯರು ನಿರ್ಭಯ ವೃತ್ತಿಯವರೂ, ಸಾಹಸ ಪ್ರಿಯರೂ ಆಗಿದ್ದುದು ಅವರ ಎಲ್ಲ ನಡೆವಳಿಯಲ್ಲಿಯೂ ಕಂಡು ಬರುತ್ತದೆ; ಅಪರಾತ್ರಿ ಕಾಳರಾತ್ರಿಗಳಲ್ಲಿ ಪ್ರವಾಸದ ಮಾತಿರಲಿ, ಕಟ್ಟಡವಿಯಲ್ಲಿ ಒಬ್ಬಂಟಿಗರಾಗಿ ಅಲೆದಾಡುವುದಿರಲಿ, ಪರ್ವತಾಗ್ರಗಳ ಇಕ್ಕಟ್ಟಿನ ಕಣಿವೆಗಳನ್ನು ಏರಿ ಇಳಿಯುವುದಿರಲಿ, ಗಲಾಟೆ ಗುದ್ದಾಟಗಳ ನೆರವಿಯಲ್ಲಿ ಹೋಗುವುದಾಗಲಿ, ಕೊನೆಗೆ ಮಹಾ ಯುದ್ಧದ ಭೀಕರ ಕಾಲಾವಧಿಯಲ್ಲಿ ಹಡಗದ ಪ್ರವಾಸಮಾಡುವುದಿರಲಿ. ಬಹಳ ಚನ್ನಾಗಿ ಈಸಲು ಬರುತ್ತಿದ್ದುದರಿಂದ ಬೇಕಾದಲ್ಲಿ ಈಸಲು ಧುಮುಕುವುದು ಅವರಿಗೆ ಸಾಹಸವೆನಿಸುತ್ತಿದ್ದಿಲ್ಲ. ಇಂಗ್ಲೆಂಡಿನ ಪ್ರವಾಸದ ಕಾಲಕ್ಕೆ ಹಡಗದ ಮೇಲಿದ್ದಾಗ ಕೊರಳಲ್ಲಿ ತೇಲಿಸುವ ಪಟ್ಟಿಗಳನ್ನು ಕಟ್ಟಿಕೊಂಡು ಸಣ್ಣ ನಾವೆಗಳಲ್ಲಿ ಕುಳಿತುಕೊಳ್ಳುವದನ್ನು ಹೇಳಿಕೊಡುತ್ತಿದ್ದರು; ಏಕೆಂದರೆ ಆಗಿನ ಕಾಲದಲ್ಲಿ (ಟಾರ್ಪೆಡೊ) ನೀರಿನ ಸುರಂಗುಗಳಿಂದ ಹಡಗವು ಮುಳುಗುವ ಹೆದರಿಕೆಯಿತ್ತು. ಒಂದು ದಿನ ಸಣ್ಣ ನಾವೆಗಳಿಗೆ ಇಳಿಯುವ ರಂಗತಾಲೀಮು ಆಯ್ತು. ಲೋಕಮಾನ್ಯರು ಅಂತಹ ಇಳಿ ವಯಸ್ಸಿನಲ್ಲಿ ಸಹ ಕೊರಳಲ್ಲಿ ಪಟ್ಟಿಯನ್ನು ಕಟ್ಟಿಕೊಂಡು ಉದ್ದವಾದ ಹಗ್ಗದ ನಿಚ್ಚಣಿಕೆಯಿಂದ ಸರ್ರನೆ ಇಳಿದರು. ನಾವೆಯನ್ನು ಹುಟ್ಟು ಕಡಿಯುತ್ತ ದೂರಕ್ಕೆ ಒಯ್ಯುವ ಪ್ರಯೋಗವನ್ನು ಸ್ವಂತ ಮಾಡಿದರು; ಇಷ್ಟೇ ಅಲ್ಲ, ಹಗ್ಗ ಬಿಚ್ಚುವುದೇ ಮೊದಲಾದ ನೌಕೆಯು ಹೊರಡುವ ಪೂರ್ವಸಿದ್ಧತೆಯನ್ನೆಲ್ಲ ತಾವೇ

ಮಾಡಿದರು. ತಿರುಗಿ ಬಂದು ತಮ್ಮ ಸಂಗಡಿಗರಿಗೆ ಅದನ್ನೆಲ್ಲ ಕಲಿಸಿ
ಅವರಿಂದಲೂ ನಾವೆಯನ್ನು ಆಡಿಸಿದರು.

೧೮೯೩ ರಲ್ಲಿ ಪುಣೆಯಲ್ಲಿ ಗಲಾಟೆ ಗುದ್ದಾಟವಾದ ಸುದ್ದಿ
ಯನ್ನು ಕೇಳಿದೊಡನೆಯೆ ಟಿಳಕರು ನಾಮಜೋಶಿ ಪ್ರಭೃತಿಗಳೊಂ
ದಿಗೆ ನೇರವಾಗಿ ಆ ದೊಂಬಿಯ ಸ್ಥಳಕ್ಕೆ ಹೋದರು. ಮುಂದೆ
ನಾಮಜೋಶಿಯವರೇ ದೂರದೃಷ್ಟಿಯಿಂದ ಟಿಳಕರನ್ನು ಬೇರೊಂದೆ
ಡೆಗೆ ಒಯ್ದರು.

ಸುರತಿನಲ್ಲಿ ಆದ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನು ಆರಿ
ಸುವ ಠರಾವಿಗೆ ಉಪಸೂಚನೆಯನ್ನು ತರಬೇಕೆಂದು ಗೊತ್ತಾದಾಗ
ಆ ಕೆಲಸವನ್ನು ತಾವಾಗಿಯೇ ವಹಿಸಿಕೊಂಡರು. ಆಗಿನ ಪ್ರಸಂಗ
ದಲ್ಲಿ ಉರಿದೆದ್ದು ಮೈಮೇಲೆ ಬಂದ ವಿರೋಧಗಳಿಗೂ ಅತ್ಯಾಚಾರ
ಮಾಡಲು ಹವಣಿಸಿದ ಹಲಕೆಲವು ಪುಂಡಗುಂಡರಿಗೂ ಸಹ ಎಳ್ಳಷ್ಟು
ಲೆಕ್ಕಿಸದೆ ಪ್ರಶಾಂತ ಗಂಭೀರ ವೃತ್ತಿಯಿಂದ ವ್ಯಾಸಪೀಠದ ಮೇಲೆ
ನಿಂತ ಟಿಳಕರು ಎಂಟೆದೆಯ ಬಂಟನಿಗೂ ಮೀರಿದವರಾಗಿದ್ದರು. ಅವರ
ಆ ಸಮಯದ ಅತುಲಧೈರ್ಯ, ಸಹನಶೀಲತೆ ಗಂಭೀರವೃತ್ತಿ ಮೊದ
ಲಾದವುಗಳು ಒಳ್ಳೊಳ್ಳೆಯವರಿಗೂ ಬೆರಗುಗೊಳಿಸಿದುವು.

ಕೋರ್ಟಿನ ನ್ಯಾಯ, ಸೆರೆಮನೆಗಳ ವಿಚಾರದಲ್ಲಿ ಅವರು ತೋರಿ
ಸಿದ ಧೈರ್ಯದ ಸಂಗತಿಗಳು ಸರ್ವಶ್ರುತವಾಗಿವೆ. ಇವರ ಮೇಲೆ
ಹೊಸ ಆರೋಪವನ್ನಿಟ್ಟು ಮಾಡಿದ ನ್ಯಾಯಸಮಯದಲ್ಲಿಯೂ ಅದರ
ಕೊನೆಯ ತೀರ್ಪಿನ ಕಾಲದಲ್ಲಿಯೂ ಲೋಕಮಾನ್ಯರಿಗೆ ವಿನೋದ
ಗೋಷ್ಠಿಗಳ ನೆನಪಾಗಬೇಕೆಂದರೆ ಅವರ ಮನಸ್ಸಿನ ಸ್ಥೈರ್ಯ, ಶಾಂತಿ
ಅದೆಂತಹದಿರಬೇಕು! ನ್ಯಾಯದ ತೀರ್ಪು ಕೇಳಲು ಹೊರಟಾಗ ಹತ್ತಿರ
ಕುಳಿತವರಿಗೆ ಅವರು ನುಡಿದುದೇನಂದರೆ: ಹೋಗುವಾಗ ನಾವು
ನಾಲ್ವರು ಹೊರಟೆವು; ತಿರುಗಿ ಬರುವಾಗ ನೀವು ಮೂವರೇ ಇರತಕ್ಕ

ವರು. ಆಗ ಜನರು ನಿಮಗೆ 'ತ್ರಯಾಣಾಂ ಧೂರ್ತಾಣಾಂ' ಎಂದು ಹೆಸರಿಡಬಹುದು ಎಚ್ಚರ." ಒಬ್ಬ ದೊಡ್ಡ ವಕೀಲನನ್ನು ನೋಡುವುದರ ಬದಲು ಇಬ್ಬರು ಮಧ್ಯಮ ವಕೀಲರನ್ನು ನೇಮಿಸಿದರಾಯಿತು ಎಂದು ಯಾರೊ ನುಡಿದುದಕ್ಕೆ ಇಪ್ಪತ್ತು ವರ್ಷದ ವರನ ಬದಲು ಹತ್ತು ಹತ್ತು ವರ್ಷದ ಎರಡು ವರಗಳನ್ನು ತರಬೇಕು ಎಂದು ಪರಿಹಾಸ ಮಾಡಿದರು.

೧೯೦೮ ರಲ್ಲಿ ಮುಂಬೈ ಹೈಕೋರ್ಟಿನಲ್ಲಿ ನಡೆದ ಅವರ ಮೇಲಿನ ರಾಜದ್ರೋಹದ ಖಟ್ಲೆಯಲ್ಲಿ ಶಿಕ್ಷೆಯನ್ನು ವಿಧಿಸುವಾಗ ನ್ಯಾಯಾಧೀಶರು ಉಸುರಿದ ಗಂಭೀರ ಮತ್ತು ಭಯಂಕರ ಶಬ್ದಗಳಿಗೆ ಪ್ರತಿಯಾಗಿ ಲೋಕಮಾನ್ಯರು ತಮ್ಮ ಘನಗಂಭೀರ ಧ್ವನಿಯಿಂದ ದಿವ್ಯವಾದ ಶಾಶ್ವತ ತತ್ವವನ್ನೊಂದು ಹೇಳಿ ತಮಗೆ ಶಕ್ಯವಿದ್ದಷ್ಟು ಆ ನ್ಯಾಯಾಧೀಶನ ತೇಜೋಭಂಗ ಮಾಡಿದರು. ಟಿಳಕರಿಗೆ ಆಗ ೫೨ ವರ್ಷಗಳ ವಯಸ್ಸು; ಮುಪ್ಪು ಇಣಿಕಿ ನೋಡುತ್ತಿದೆ; ತನ್ನ ಅಧಿಕಾರವನ್ನು ಸ್ಥಾಪಿಸಲು ಇಂತಹ ವಯಸ್ಸಿನಲ್ಲಿ ತನಗೆ ಕಠೋರ ಶಿಕ್ಷೆಯಾಗುವುದನ್ನು ತಿಳಿದೂ ತಲ್ಲಣಗೊಳ್ಳದೆ ಎದೆಗುಂದದೆ ಲೋಕಮಾನ್ಯರು "ಈ ನ್ಯಾಯಾಸ್ಥಾನಕ್ಕಿಂತಲೂ ಶ್ರೇಷ್ಠವಾದ ಒಂದು ದೈವೀ ಶಕ್ತಿಯಿದ್ದು ಜಗತ್ತಿನ ನಿಯಂತ್ರಣವನ್ನು ಮಾಡುತ್ತಿದೆ. ನಾನು ಶಿಕ್ಷೆಯನ್ನು ಅನುಭವಿಸುವುದರಿಂದಲೆ ನನ್ನ ದೇಶದ ಊರ್ಜಿತಾವಸ್ಥೆಯಾಗಬೇಕೆಂದು ದೈವೀ ಸಂಕಲ್ಪವಿರುವಂತೆ ತೋರುತ್ತದೆ" ಎಂದು ನಿರ್ದಾಕ್ಷಿಣ್ಯದಿಂದ ಹೇಳಬೇಕಾದರೆ ಏನು ಅವರ ಆತ್ಮವಿಶ್ವಾಸ! ಎಷ್ಟು ಅವರ ಅವಿಚಲ ಧೈರ್ಯ!

ವಿಲಾಯತಿಯಿಂದ ಮರಳಿ ಬಂದ ಬಳಿಕ ಲೋಕಮಾನ್ಯರಿಗೆ ಪುಣೆಯ ನಾಗರೀಕರು ಸಾರ್ವಜನಿಕವಾಗಿ ಒಂದು ಮಾನಪತ್ರವನ್ನು ಅರ್ಪಿಸಬೇಕೆಂದು ಗೊತ್ತು ಮಾಡಿದ್ದರು. ಆದರೆ ಕೆಲವು ತಲೆತಿರುಕರು ಸಮಯ ಸಾಧಿಸಿದರೆ ಸೆಗಣಿಮಣ್ಣನ್ನು ಎರಚುವ ಹೊಂಚು ಹಾಕಿ

ರುವರೆಂದೂ ಒಂದು ಸುದ್ದಿಯಿತ್ತು. ಈ ಸಂಬಂಧದಿಂದ ಮಿತ್ರರೂ ಅನುಯಾಯಿಗಳೂ ಮುಂದೇನು ಮಾಡಬೇಕು? ಎಂದು ಮುಂತಾಗಿ ಕಿವಿಮಾತು ನಡೆಯಿಸಿದುದನ್ನು ನೋಡಿದೊಡನೆ ಟಿಳಕರು ಸಿಟ್ಟಾಗಿ ತಟ್ಟನೆ ನುಡಿದುದೇನಂದರೆ: "ಮಾರ್ಕೇಟಿನಲ್ಲಿ (ಸಭಾಸ್ಥಾನಕ್ಕೆ) ಹೋಗಿ ನಾನು ನಿಲ್ಲುತ್ತೇನೆ. ಅದಾವನು ಸೆಗಣಿಯನ್ನು ಎಸೆಯುವ ನೆಂಬುದನ್ನು ನಾನು ನೋಡತಕ್ಕವನಿದ್ದೇನೆ."

ರಾಯಗಡದ ಮೇಲೆ ಒಮ್ಮೆ ಅಲ್ಲಿಯ ಕೆರೆಯಲ್ಲಿ ಈಸಲು ಎಲ್ಲರೂ ಹೊರಟರು. ಆದರೆ ಒಳಗೆ ಜಿಗಿಯಲು ಆವನೂ ಮುಂದೆ ಬರಲೊಲ್ಲನು. ಎಲ್ಲಿ ಅಡ್ಡತಿಡ್ಡ ಕಲ್ಲುಗಳು ನೀರಿನಲ್ಲಿ ಅವಿತಿವೆಯೊ ಎಂದು ಹೆದರಿಕೆ ಎಲ್ಲರಿಗೆ. ಆಗ ಟಿಳಕರು ಮುಂದುವರಿದು "ಈ ಕೆರೆಯೊಳಗಿನ ಕಲ್ಲುಗಳಿಂದಲೇ ಈ ದುರ್ಗದೊಳಗಿನ ಅರಮನೆ ಮೊದಲಾದವುಗಳನ್ನೆಲ್ಲ ಕಟ್ಟಿರುವರೆಂದಬಳಿಕ ಇಲ್ಲಿ ಅಂಕಡೊಂಕ ಕಲ್ಲುಗಳು ಎಲ್ಲಿಂದ ಬರಬೇಕು?" ಎಂದವರೆ ನೀರಿನಲ್ಲಿ ತಾನೇ ಮೊದಲು ಪ್ರವೇಶ ಮಾಡಿದರು.

ಡೆಕ್ಕನ ಕಾಲೇಜಿನಲ್ಲಿ ಒಮ್ಮೆ ಕೆಲವು ಮಿತ್ರರು ಸೇರಿ ಮೇಲ್ಮಾಳಿಗೆಯ ಮೇಲೆ ಮಾತಾಡುತ್ತ ಕುಳಿತಿದ್ದರು. ಆ ಮಾತು ಈ ಮಾತು ನಡೆದು ಶಕ್ತಿಪರಾಕ್ರಮದ ಮಾತುಗಳೂ ಬಂದವು. ಕೂಟದ ಮೈಯಲ್ಲಿ ಆವೇಶ ಉತ್ಸಾಹವು ಸಂಚರಿಸಿತು. ಅವರಲ್ಲಿ ಒಬ್ಬನು "ಈಗ ಇಲ್ಲಿಂದ ಫಕ್ಕನೆ ಅದೃಶ್ಯರಾಗುವ ಪ್ರಸಂಗ ಬಂದರೆ ಏನು ಮಾಡುವಿರಿ?" ಎಂದನು. ಉಳಿದವರೆಲ್ಲನೇಕರು ಒಬ್ಬರೊಬ್ಬರನ್ನು ನಿರುಕಿಸಿ ಇದೇನು ಅಸಾಧ್ಯವೇ ಸರಿ ಎಂದರು. ಆದರೆ ಟಿಳಕರು ತಟ್ಟನೆದ್ದು ಗಂಡುಗಚ್ಚೆಯನ್ನು ಕಟ್ಟಿ 'ಹುಂ, ಇಕೊಳ್ಳಿ ನಾನು ಹೀಗೆ ಮಾಡುವೆನು' ಎಂದವರೆ ಆ ಮೇಲ್ಮಾಳಿಗೆಯಿಂದ ಕೆಳಕ್ಕೆ ಹಾರಿದರು. ಇವರು ಕಾಲು ಮುರಿದುಕೊಂಡಿರಲಿಕ್ಕೆ ಸಾಕೆಂದು ಗ್ರಹಿಸಿ ಉಳಿದವರೆಲ್ಲ ಸೋಪಾನ ಮಾರ್ಗದ ಕಡೆಗೆ ಬರುವಷ್ಟರಲ್ಲಿ ಟಿಳಕರು ತಮ್ಮ ಕಾಲಿನಿಂದಲೇ ಮೇಲೇರಿ ಬಂದುದು ಅವರಿಗೆ ಕಂಡಿತು!

## ೨. ಸತತ ಪರಿಶ್ರಮ

ಲೋಕಮಾನ್ಯರು ತಾವು ಆವುದೆ ಕಾರ್ಯವನ್ನು ಕೈಕೊಂಡ ಕೂಡಲೆ ಶಕ್ಯವಿದ್ದ ಎಲ್ಲ ಬಗೆಗಳಿಂದಲೂ ಅದನ್ನು ಕೊನೆಗಾಣಿಸಲಿಕ್ಕೆ ಅವಿಶ್ರಾಂತವಾಗಿ ಸತತ ಪರಿಶ್ರಮ ಮಾಡುತ್ತಿದ್ದರು. ಅವರ ಉನ್ನತಿಗೂ ಕೀರ್ತಿಗೂ ಕಾರಣವಾದ ಅನೇಕ ಗುಣಗಳಲ್ಲಿ ಇದೂ ಒಂದು ಮುಖ್ಯವಾಗಿದೆ. ಈ ಸಂಬಂಧದಿಂದ ಶ್ರೀ. ಕಾ. ನ. ಕೇಳಕರರು ಹೀಗೆ ನೆನಪುಗಳನ್ನು ಕೊಡುತ್ತಾರೆ:

ನ್ಯೂ ಇಂಗ್ಲಿಷ ಸ್ಕೂಲಿನ ಅನಾವರಣ ಸಮಾರಂಭವಾಗುವ ಮುನ್ನಾದಿನ ನಾಮುಜೋಶಿ, ಮತ್ತು ಟಿಳಕರು ಸ್ವತಃ ತಾವೆ ಆ ಕೋಣೆಯನ್ನು ಸಾರಿಸಿದರು. ಇರುಳನ್ನು ಅಲ್ಲಿಯೆ ಕರೆಹಲಿಗೆಯ ಮೇಲೆ ಮಲಗಿ ಕಳೆದರು. ಬೆಳಗಿನ ಜಾವದಲ್ಲಿದ್ದ ಬಾಕು ಖುರ್ಚಿಗಳನ್ನೆಲ್ಲ ತಮ್ಮ ಉತ್ತರೀಯದಿಂದ ತಿಕ್ಕಿ ಜಳಜಳ ಮಾಡಿ ಮತ್ತೆ ಪತ್ತುಗಂಟೆಯೊಳಗಾಗಿ ಊಟ ತೀರಿಸಿಕೊಂಡು ಸಮಾರಂಭದ ಹೊತ್ತಿಗೆ ಹನ್ನೊಂದಕ್ಕೆ ಸಿದ್ಧರೇ!

ಶಾಲೆಯು ಆರಂಭವಾದ ಬಳಿಕ ಸಹ ಎಷ್ಟೋ ದಿನಗಳವರೆಗೆ ಸಂಜೆಯ ಊಟ ತೀರಿಸಿಕೊಂಡು ಶಾಲೆಗೇ ಮಲಗುವದಕ್ಕೆ ಹೋಗುತ್ತಿದ್ದರು. ಅಲ್ಲಿ ಮುಂದಿನ ತಮ್ಮ ಕಾರ್ಯಕಲಾಪಗಳ ವಿಚಾರ ವಿಮರ್ಶೆಗಳನ್ನು ನಡಿಸುತ್ತಿದ್ದರು. ಕರೆ ಹಲಿಗೆಯ ಮೇಲೆ ಚಾಪೆಯನ್ನು ಚಲ್ಲಿದರಾಯಿತು; ಇದೆ ಹಾಸಿಗೆ. ಒಂದೆರಡು ಗಂಟೆಯವರೆಗೂ ಮಾತುಕಥೆಗಳು ನಡೆಯುತ್ತಿದ್ದುವು. ಈ ವಿಚಾರ ಚರ್ಚೆಯಲ್ಲಿಯೆ ಮುದ್ರಣಾಲಯ ಮತ್ತು ಕೇಸರೀ–ಮರಾಠಾ ಪತ್ರಿಕೆಗಳನ್ನು ತೆಗೆಯುವುದು ಗೊತ್ತಾಯಿತು.

ಒಮ್ಮೆ ಮುದ್ರಣಾಲಯ ಕಟ್ಟಡಕ್ಕೆ ಬೆಂಕಿ ಬಿದ್ದಾಗ ಆ ನಟ್ಟಿರುಳಲ್ಲಿ ನಾಮುಜೋಶಿ ಪ್ರಭೃತಿಗಳು ತಮ್ಮ ತಲೆಯಮೇಲೆ ಅಚ್ಚುಕೂಟದ ಸಾಮಾನುಗಳನ್ನೆಲ್ಲ ಹೊತ್ತು ಒಯ್ದರು.

ಇದೇ ಮಾತನ್ನು ಕುರಿತು ಟಿಳಕರ ಚರಿತ್ರಕಾರರೂ ಪಟ್ಟ ಶಿಷ್ಯರೂ ಆದ ನ. ಚಿ. ಕೇಳಕರರು ಬರೆದಿರುವುದೇನಂದರೆ:

ಟಿಳಕರ ಕಾರ್ಯಕ್ಷೇತ್ರವು ದೊಡ್ಡದಿದ್ದಂತೆ ವಿಶ್ರಾಂತಿಯಿಲ್ಲದೆ ಕೆಲಸ ಮಾಡುವ ಸಾಮರ್ಥ್ಯವೂ ಅವರಲ್ಲಿ ಅಸಮಾನ್ಯವಾಗಿತ್ತು. ಕೆಲಸದಲ್ಲಿ ಮೈಮರೆತು ಹಸಿವೆ ನೀರಡಿಕೆಗಳ ಎಚ್ಚರವೂ ಇಲ್ಲದಿರುವುದು ಅತಿಶಯೋಕ್ತಿಯೆನಿಸಿದರೂ ಕೆಲವು ಅಳತೆಯವರೆಗೆ ಇದು ನಿಜವೂ ಆಗಿದೆ. ಟಿಳಕರು ನೀಮಾ ಪುರುಷರೆಂದೇ ಹೇಳಲು ಅಡ್ಡಿಯಿಲ್ಲ ಅವರು ಸ್ವತಃ ತಮ್ಮ ಒಬ್ಬ ಮಿತ್ರನ ಹತ್ತಿರ ಹೀಗೆ ಹೇಳುದುದರ ಉಲ್ಲೇಖವಿದೆ: "ಮುಂಬೈಯ ಒಂದು ರಾಷ್ಟ್ರೀಯ ಸಭೆಯ ಸಮಯದಲ್ಲಿ ಕೇಸರೀ ಪತ್ರಿಕೆಯ ವಿಶೇಷ ಸಂಚಿಕೆಗಳನ್ನು ಪ್ರಕಟಿಸುವುದಕ್ಕಾಗಿ ನಾನು ಒಂದೇ ಖುರ್ಚಿಯ ಮೇಲೆ ಬಿಟ್ಟೂಬಿಡದೆ ೩೬ ತಾಸು ಕುಳಿತು ಕೆಲಸ ಮಾಡಿದ್ದೇನೆ." ಅವರು ಹೇಳಿದ ಈ ಮಾತು ಸತ್ಯವಿರಬೇಕೆಂದು ನಂಬಲು ಸಾಕಷ್ಟು ಅನುಭವಗಳು ಜನರಿಗೆ ಹೊರಗೆ ಬೇಕಾದಷ್ಟು ಬಂದಿವೆ. ಅವರ ದೊಡ್ಡ ದೊಡ್ಡ ಪ್ರಚಾರ ಪ್ರವಾಸಗಳ ಕಾಲಕ್ಕೆ ಹಗಲಿರುಳೆನ್ನದೆ ಹೇಗೆ ಕೆಲಸ ಮಾಡುತ್ತಿದ್ದರೆಂಬದನ್ನು ಜನರು ನೋಡಿದ್ದುಂಟು. ಮತ್ತು ಅದೂ ಸಹ ಗಲಾಟೆಯ ಕೆಲಸ, ಓಡಾಟದ ಕೆಲಸ, ಕೂಗುವ ಕೆಲಸ. ಅಂದಬಳಿಕ ಮನೆಯಲ್ಲಿ ಆರಾಮವಾಗಿ ಕುಳಿತು ಓದುಬರೆವುದನ್ನು ಇಲ್ಲವೆ ವಾದವಿವಾದದ ಕಾರ್ಯವನ್ನು ಅವರು ಬೇಕಾದಷ್ಟು ಹೊತ್ತು ಮಾಡುತ್ತಿರಬಹುದೆಂಬಲ್ಲಿ ಏನಾಶ್ಚರ್ಯ? ಬಾಪಟ ಕಮಿಶನ್ನಿನಲ್ಲಿ ದಿನಾಲು ಕಮಿಶನ್ನ ಮುಂದೆ ಹಾಜರಿದ್ದು ಉಳಿದ ಹೊತ್ತಿನಲ್ಲಿ ನಾಲ್ವತ್ತು ಐವತ್ತು ಹಾಳಿಗಳನ್ನು ಬರೆದು ಓದಲಿಕ್ಕೆ ವಕೀಲನ ಕಡೆಗೆ ಕೊಡುತ್ತಿದ್ದರು. ಚಿರೋಲ ಕೇಸಿನ ಟಿಪ್ಪಣಿ ಪುಸ್ತಕಗಳನ್ನು ಬರೆಯಲು ಅವರು ಹಗಲೆನ್ನಲಿಲ್ಲ ಇರುಳೆನ್ನಲಿಲ್ಲ. ಸಿಂಹಗಡದ ಮೇಲೆ ಆರ್ಯರ ಮೂಲ ವಸತಿ ಸ್ಥಾನವನ್ನು ಕುರಿತು ಗ್ರಂಥಬರೆಯುವಾಗ ಮಧ್ಯಾಹ್ನ ಊಟ

ಮಾಡಿ ಒಮ್ಮೆ ಕುಳಿತರೆಂದರೆ ರಾತ್ರಿ ಊಟದ ಹೊತ್ತಿನವರೆಗೆ ಅವರು ಮಿಸುಕಾಡುತ್ತಿರಲಿಲ್ಲ. ಮತ್ತು ಯಾವದೊಂದು ಅಧ್ಯಾಯವನ್ನು ಮುಗಿಸುವದಿದ್ದಾಗ ಊಟವನ್ನೂ ಮುಂದೆ ನೂಕುತ್ತಿದ್ದರು. ಅವರ ಈ ಹಿಡಿತದಲ್ಲಿ ಸಿಕ್ಕ ಲೇಖಕನು ದಣಿದು ತಿಣಿಕಬೇಕಾಗುತ್ತಿತ್ತು; ಆದರೆ ಟಿಳಕರಿಗೆ ಮಾತ್ರ ದಣಿವಿಲ್ಲ. ಟಿಳಕರು ಇಡೀ ಆಯುಷ್ಯದ ಲ್ಲೆಲ್ಲ ಲೇಖಕನಿಗೆ ತಾವು ವಿಷಯವನ್ನು ಕೇಳಿ ಬರೆಯಿಸುತ್ತಿದ್ದುದು; ಸ್ವಂತ ಕೈಯಿಂದ ಬರೆಯುವುದಕ್ಕೆ ಅವರಿಗೆ ಬೇಜಾರ. ಹೀಗಿದ್ದರೂ (ಮಂಡಾಲೆ ಸೆರೆಮನೆಯಲ್ಲಿ) ಅವರು ಗೀತಾರಹಸ್ಯವನ್ನು ಆಮೂಲಾಗ್ರವಾಗಿ ಸ್ವಹಸ್ತದಿಂದ ಅಲ್ಪಾವಧಿಯಲ್ಲಿಯೇ ಬರೆದು ತೆಗೆದರೆಂಬ ಮಾತು ಅವರ ಅವಿಶ್ರಾಂತಶ್ರಮದ ಉತ್ಕೃಷ್ಟ ದೃಷ್ಟಾಂತವಾಗಿದೆ. ಗೀತಾರಹಸ್ಯದ ಪ್ರಥಮ ಮುದ್ರಣದ ಕಾಲಕ್ಕೆ ನಸುಕು ಹರಿವುದರೊಳಗಾಗಿ ಎದ್ದು ಚಿತ್ರಶಾಲಾ ಪ್ರೆಸ್ಸಿಗೆ ಹೋಗಿ ಅಲ್ಲಿ ಕಂಪೋಸಿಟರ ಮತ್ತು ಪ್ರೂಫ ಕರೆಕ್ಟರರಿಗೆ ಬೆನ್ನು ಹತ್ತುತ್ತಿದ್ದರು. ಇಂತು ಬೆಂಬತ್ತಿ ೨-೩ ತಿಂಗಳಲ್ಲಿಯೇ ಮೊದಲನೆಯ ಆವೃತ್ತಿಯನ್ನು ಪ್ರಕಟಿಸಿದರು. ಬೇಸರ ಎಂಬ ಶಬ್ದವೇ ಅವರಿಗೆ ಗೊತ್ತಿದ್ದಿಲ್ಲ.

## ೩. ಮಿತ್ರಪ್ರೇಮ

ಟಿಳಕರ ಮಿತ್ರಪ್ರೀತಿ ಅನ್ಯಾದೃಶವಾದುದು. ಲೋಕಮಾನ್ಯರು ಯಾರನ್ನಾದರೂ ತಮ್ಮವನೆಂದು ತಿಳಿದ ಬಳಿಕ ಆಯಿತು; ಆ ವ್ಯಕ್ತಿಯನ್ನು ಎಂದೆಂದಿಗೂ ಮರೆವಂತಿಲ್ಲ. ಲೋಕಮಾನ್ಯರು ತಮ್ಮ ಗೆಳೆಯರಿಗಾಗಿ ತೋರಿಸಿದ ಪ್ರೀತಿ ಸ್ವಾರ್ಥತ್ಯಾಗಗಳಿಗೆ ಆಳತೆಯೆ ಇಲ್ಲ. ಅವರಿಗಾಗಿ ಅನುಭವಿಸಿದ ಕಷ್ಟಗಳಿಗೆ ಎಣೆಯಿಲ್ಲ. ಶ್ರೀಮಂತ ಬಾಬಾ ಮಹಾರಾಜ ಎಂಬ ಮಿತ್ರನ ಕೆಲಸಕ್ಕಾಗಿ ಲೋಕಮಾನ್ಯರ ಅರ್ಧಕ್ಕಿಂತ ಹೆಚ್ಚು ಆಯುಷ್ಯವು ವೆಚ್ಚಾಯಿತು. ಎರಡು ಎರಡೂವರೆ ಲಕ್ಷ ಹಣವು ಹಾಳಾಯಿತು. ಲೋಕಮಾನ್ಯರ ಸುದೈವದಿಂದ ಈ ನ್ಯಾಯದಲ್ಲಿ ಕೊನೆಗೆ ಪ್ರಿವ್ಹಿ ಕೌನ್ಸಿಲಿನಲ್ಲಿ ಗೆಲವು ದೊರೆತುದರಿಂದ

ವೆಚ್ಚವಾದ ಲಕ್ಷಾವಧಿ ರೂಪಾಯಿಗಳ ಸಾಲವು ವೈಯೇಲೆ ಬರಲಿಲ್ಲ ವೆಂಬುದು ನಿಜ. ಆದರೆ ಈ ಖಟ್ಲೆಯಲ್ಲಿ ಟಿಳಕರಿಗೆ ಸಹಿಸಬೇಕಾದ ಮಾನಸಿಕ ಶಾರೀರಿಕ ಕ್ಲೇಶಗಳ ಮೂಲಕವಾಗಿಯೆ ಅವರ ಕೆಲವೊಂದು ವರ್ಷಗಳ ಆಯುಷ್ಯವಾದರೂ ಕಡಿಮೆಯಾಗಿರಲಿಕ್ಕೆಬೇಕೆಂದು ಅನೇಕರು ಹೇಳುತ್ತಾರೆ.

ಶ್ರೀಯುತ ಬಾಪಟರೆಂಬ ಬಡೋದೆಯ ಇನ್ನೊಬ್ಬ ಮಿತ್ರರ ವಿಷಯಕ್ಕೂ ಹೀಗೆಯೆ ಕೆಲ ದಿನ ಲೋಕಮಾನ್ಯರಿಗೆ ತಮ್ಮ ಜೀವ ವನ್ನು ಸವೆಯಿಸಬೇಕಾಯಿತು. ಶ್ರೀ. ಬಾಪಟರನ್ನು ಬಡೋದೆಯ ರೆಸಿಡೆನ್ಸಿಯವರು ತೊಡಕಿನಲ್ಲಿ ಹಿಡಿಯಬೇಕೆಂದು ಅವರ ಮೇಲೆ ಅನ್ಯಾಯದ ಆರೋಪವನ್ನು ಹೊರಸಿದ್ದರು. ಆಗ ಲೋಕಮಾನ್ಯರು ಬಡೋದೆಗೆ ಹೋಗಿ ಅಲ್ಲಿಯೆ ನಿಂತು ಇರುಳನ್ನು ಹಗಲು ಮಾಡಿ ದುಡಿದು ಕಾಯಿದೆಕಾನೂನುಗಳ ಸಹಾಯವನ್ನು ಒದಗಿಸಿಕೊಟ್ಟು ಮಿತ್ರರಿಗೆ ನೆರವಾದರು. ಈ ಕಾಲಕ್ಕೆ ನೆಳಲಿಗೆ ನಿಲ್ಲಲಿಕ್ಕೂ ಜನರು ಅಂಜುತ್ತಿದ್ದರು. ಆದರೆ ಲೋಕಮಾನ್ಯರು ಮಿತ್ರಪ್ರೇಮದಿಂದ ಆರ್ಥಿಕ, ಶಾರೀರಿಕ, ಮಾನಸಿಕ ತೊಂದರೆಗಳಾವವನ್ನೂ ಲೆಕ್ಕಿಸದೆ ಶ್ರೀ. ಬಾಪಟರ ಸಹಾಯಾರ್ಥವಾಗಿ ಬಡೋದೆಗೆ ಧಾವಿಸಿ ಹೋದರು.

ಅವರ ಆಯುಷ್ಯದಲ್ಲಿ ಇನ್ನೂ ಎಷ್ಟೋ ಇಂತಹ ಪ್ರಸಂಗ ಗಳು ಇವೆ. ರಾಜಕೀಯ ಆಂದೋಲನಗಳಲ್ಲಿ ಸಿಕ್ಕು ಕಷ್ಟಬಟ್ಟಂತಹ ದೇಶಸೇವಕರಲ್ಲಿ ಬಡತನದ ಬೇಗೆಯಿಂದ ಬಳಲಿ ಕಂಗೆಟ್ಟ ಎಷ್ಟೋ ಜನರು ಅವಶ್ಯಕವಾದ ನೆರವು ಕೊಟ್ಟು ಅವರನ್ನು ದಾರಿಗೆ ಹಚ್ಚಿದ ಉದಾಹರಣೆಗಳಿಗೂ ಕೊರತೆಯಿಲ್ಲ. ಶ್ರೀ. ಭಟ್ಟ ಎಂಬ ನಾಸಿಕದ ತರುಣರೊಬ್ಬರು ೧೯೦೭ ರ ಕ್ರಾಂತಿಕಾರರ ತಂಡದಲ್ಲಿ ಸೇರಿದ ಆರೋಪದಿಂದ ಶಿಕ್ಷೆಗೆ ಗುರಿಯಾಗಿದ್ದರು. ಅವರು ಸೆರೆಮನೆಯಿಂದ ಹೊರಗೆ ಬಂದಬಳಿಕ ಬಡತನದ ಬಳಲಿಕೆಯಿಂದ ಕಂಗೆಟ್ಟು ಇಲ್ಲದ ಎಣಿಕೆಗಳಿಗೆ ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ ಲೋಕ

ಮಾನ್ಯರು ಅವರನ್ನು ಕೇಸರಿಯ ಸಂಪಾದಕ ವರ್ಗದಲ್ಲಿ ಸೇರಿಸಿ ಕೊಂಡು ಹೊಟ್ಟೆಯ ಚಿಂತೆಯೊಳಗಿಂದ ಮುಕ್ತರನ್ನಾಗಿ ಮಾಡಿದರು. ಇಷ್ಟೆ ಅಲ್ಲದೆ ಶ್ರೀ. ಭಟ್ಟರು ಮುಂದಿನ ವಿದ್ಯಾಭ್ಯಾಸಕ್ಕಾಗಿ ನೆರವು ಬೇಡಿದಾಗ ಶಿಕ್ಷಣಕ್ಕಾಗಿ ಕೆಲವು ಹಣವನ್ನೂ ಕೊಟ್ಟು ತಮ್ಮಮೇಲೆ ಲೋಕಮಾನ್ಯರು ಅನಂತ ಉಪಕಾರಗಳನ್ನು ಮಾಡಿದರೆಂದು ಅವರೇ ಬರೆದಿರುತ್ತಾರೆ.

## ೪. ಕೋಮಲ ಮನಸು

ಪ್ರೊ. ವಾ. ಮ. ಜೋಶಿ ಎಂಬವರು ಮರಾಠಾ ಪತ್ರಿಕೆಯ ಸಹಸಂಪಾದಕರಿದ್ದಾಗ ಬಂದ ಒಂದು ಅನುಭವವನ್ನು ಹೀಗೆ ಬರೆದಿದ್ದಾರೆ:

ವಿಭೂತಿಗಳ ಸಂದರ್ಶನದಿಂದ, ಅವರ ಪ್ರೀತಿ ಪುರಸ್ಸರವಾದ ಒಂದೆರಡು ಶಬ್ದಗಳಿಂದ, ಕಕ್ಕುಲತೆಯ ನೋಟದಿಂದ, ಗಂಭೀರ ಮಂದ ಸ್ಮಿತದಿಂದ ಅಥವಾ ಮೌನ ವ್ಯಾಖ್ಯಾನದಿಂದಲೇ ಎಷ್ಟೊ ಸಾರೆ

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।

ಹೃದಯದೊಳಗಿನ ಗಂಟು ಒಡೆಯುತ್ತದೆ; ಎಲ್ಲ ಸಂಶಯಗಳೂ ಓಡುತ್ತವೆ ಎಂಬಲ್ಲಿ ಏನೂ ಸಂಶಯವಿಲ್ಲ.

ನನ್ನ ಅಂತರಂಗದೊಳಗಿನ ಕೆಲವು ಗಂಟುಗಳು ಹೀಗೆಯೆ ಒಡೆದಿವೆ. ಒಂದು ಗಂಟು ಟಿಳಕರ ಬಗೆಗೆ ಇತ್ತು. ಟಿಳಕರೆಂದರೆ ನನಗೆ ತುಂಬಾ ಆದರವಷ್ಟೇ ಅಲ್ಲ, ಪೂಜ್ಯ ಬುದ್ಧಿಯೂ ಇತ್ತು; ಮತ್ತು ಇನ್ನೂ ಇದೆ. ಆದರೆ ಎದೆಯ ಒಂದು ಬದಿಯಲ್ಲಿ ಅವರ ಬಗ್ಗೆ ಒಂದು ಗಂಟು ಇತ್ತು. ಟಿಳಕರು ಎಷ್ಟೇ ಧೀಮಂತರೂ ವಿದ್ವಾಂಸರೂ ಸ್ವದೇಶಾಭಿಮಾನಿಗಳೂ ಸ್ವಾರ್ಥತ್ಯಾಗಿಗಳೂ ಆಗಿರುವರ ಅರ್ಥ ಅವರು ನೀರಸ ತರ್ಕಪ್ರಧಾನ ಕಠೋರವೃತ್ತಿಯವರು ಎಂದು ನನ್ನ ತಿಳುವಳಿಕೆಯಾಗಿತ್ತು. 'ಮರಾಠಾ' ಆಫೀಸಿನಲ್ಲಿ ಒಂದು ವರ್ಷ ಕೆಲಸ ಮಾಡಿದ ಮೇಲೆ ನನ್ನ ಈ ಗ್ರಹಿಕೆಯು ದೃಢವಾಗತೊಡಗಿತು.

ಆದರೆ ಮುಂದೆ ಒಂದು ಶನಿವಾರ; ಇರುಳು ೧೧-೧೨ ಗಂಟೆಯು ಸುಮಾರು. ಮರಾಠಾ (ಇಂಗ್ಲಿಷ) ಪತ್ರಿಕೆಯ ಮೊದಲ ಅಚ್ಚು (ಪ್ರೂಫು) ಗಳನ್ನು ತಿದ್ದಿ ಕೊಡುವದಕ್ಕಾಗಿ ನಾನು ಆಫೀಸಿಗೆ ಹೋಗಿದ್ದೆನು; ಆಗ ಟಿಳಕರೂ ಸಹಜವಾಗಿ ಅಲ್ಲಿ ಬಂದರು. ಅವರೊಡನೆ ಅಂದು ಆದ ಸಂಭಾಷಣದಿಂದ ಲೋಕೋತ್ತರಸಾಧುಸತ್ಪುರುಷರಂತೆ ಟಿಳಕರು ಸಹ 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ।' ಎಂಬ ಮಾತಿಗೇನೂ ಹೊರತಾಗಿಲ್ಲವೆಂಬುದರ ಮನವರಿಕೆಯಾಯಿತು. ಆ, ಈ ಮಾತುಕಥೆಗಳು ನಡೆದು ನಾನು ಇರುತ್ತಿದ್ದ ಶನಿವಾರ ಪೇಟೆಯೊಳಗಿನ ತಾಂಬೆಯವರ ವಾಡೆಯ ಮಾತು ಹೊರಟಿತು. ಈ ಮಹಮನೆಯ ಯೋಗಾಯೋಗವೇ ಒಂದು ವಿಲಕ್ಷಣವಾಗಿದೆ. ಪುಣೆಯೊಳಗಿನ ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ಇಲ್ಲಿ ಹಲಕೆಲವು ದಿನಗಳಾದರೂ ಇದ್ದುದು ಕಂಡು ಬರುತ್ತದೆ. ಟಿಳಕ, ಆಗರಕರ, ಗೋಖಲೆ, ಶ್ರೀಧರಪಂತ, ಕರಂದೀಕರ, ಶಂಕರರಾವ ಲವಾಟೆ ಮೊದಲಾದವರಿಗೆ ಈ ಮನೆಯೇ ಆಶ್ರಯವನ್ನು ಕೊಟ್ಟಿತ್ತು. ಆ ವಾಡೆ ಮತ್ತು ಅಲ್ಲಿಯ ಸಂದಿಯ ಮಾತು ಬಂದು ಅಲ್ಲಿಯೆ ಕೆಲದಿನ ಟಿಳಕರ ಮನೆಯ ಹತ್ತರ ಬಾಡಿಗೆಯಿದ್ದ ಅವರ ಜೀವದ ಗೆಳೆಯ ಆಗರಕರರ ನೆನಪು ಸಹಜವಾಗಿ ಉಂಟಾಯಿತು. ಆಗರಕರರು 'ಸುಧಾರಕ' ಪತ್ರಿಕೆಯನ್ನು ಎಂಥ ಪರಿಸ್ಥಿತಿಯಲ್ಲಿ ಯಾಕೆ ತೆಗೆಯಬೇಕಾಯಿತು ಎಂಬುದನ್ನೆಲ್ಲ ಟಿಳಕರು ಹೇಳಿದರು. ತಾಂಬೆಯವರ ಮಹಮನೆಯಲ್ಲಿದ್ದುದರ ಮತ್ತು ಆಗರಕರರ ಗೆಳೆತನದ ಹಿಂದಿನ ಚಿತ್ರಪಟವೇ ಕಣ್ಣೆದುರಿಗೆ ಕಟ್ಟಿದಂತಾದುದರಿಂದ ಸಾಧಾರಣವಾಗಿ ಎಂದೂ ಭಾವನಾವಶರಾಗದಂತಹ ಟಿಳಕರು ಇಂದು ಅಲ್ಪಸ್ವಲ್ಪ ವ್ಯಾಕುಲರಾದರು; ಆಗರಕರರ ಬಗ್ಗೆ ಮಾತನಾಡುವಾಗಲಂತೂ ಅವರ ಬಾಯಿಂದ ಮಾತುಗಳೆ ಹೊರಡದಾದುವು; ಕಣ್ಣಿಂದ ನೀರ ಹನಿಗಳು ಮಾತ್ರ ಪಟಪಟನೆ ಕೆಳಗೆ ಉದುರಿದವು. ವೃತ್ತಪತ್ರಿಕೆಗಳಲ್ಲಿ ಬರೆಯುವಾಗ

ಶ್ರೀ. ಆಗರಕರರು ಪ್ರತಿಸ್ಪರ್ಧಿಗಳೆಂದು ಅವರ ಮೇಲೆ ನಿರ್ದಾಕ್ಷಿಣ್ಯ ದಿಂದ ತೀಕ್ಷ್ಣ ಟೀಕಾಸ್ತ್ರವನ್ನು ಪ್ರಯೋಗಿಸುತ್ತಿದ್ದರೂ ಲೋ. ಟಿಳಕರ ಅಂತಃಕರಣದ ಅಂತರಂಗದಲ್ಲಿ ತಮ್ಮ ಗೆಳೆಯನ ವಿಷಯಕ್ಕೆ ತುಂಬಾ ಆದರವೂ ಪ್ರೀತಿಯೂ ವಾಸವಾಗಿದ್ದುವೆಂಬುದು ಅಂದು ನನಗೆ ಅನುಭವಕ್ಕೆ ಬಂದಿತು. ಟಿಳಕರು ಇಷ್ಟು ಕೋಮಲ ಹೃದಯರೆಂದು ನಾನು ತಿಳಿದಿದ್ದಿಲ್ಲ. ಎದುರಾಳಿಗಳೊಡನೆ ಕಠೋರ ತನದಿಂದ ಕಾದಾಡುವ ಈ ಕಡುಗಲಿಯ ಅಂತರಂಗವು ಮೃದುಮಧುರವೂ ಆಗಿರುವುದೆಂದು ಅಂದು ಲೋಕಮಾನ್ಯರು ತಮ್ಮ ಮಿತ್ರನಿಗೆ ಅರ್ಪಿಸಿದ ಅಶ್ರುಗಳ ಜಲಾಂಜಲಿಯಿಂದ ಚೆನ್ನಾಗಿ ನನ್ನ ಮನವರಿಕೆಯಾಯ್ತು. ಈ ಪ್ರಸಂಗವೇನೊ ಕ್ಷುಲ್ಲಕವೆನಿಸುವಂತಿದೆ. ಆದರೆ ಮಹಾ ವಿಭೂತಿಗಳ ಬಾಹ್ಯ ಆಚರಣದ ನಿರ್ಜಲ ಮೇರು ಪ್ರದೇಶಗಳಲ್ಲಿ ಸ್ನೇಹರಸಪೂರ್ಣ ವಿದ್ಗಂಗೆಯೂ ಹೇಗೆ ಗೂಢವಾಗಿ ಹರಿಯುತ್ತಿರುತ್ತಾಳೆಂಬ ಈ ಪ್ರಸಂಗದಿಂದ ಚೆನ್ನಾಗಿ ವ್ಯಕ್ತವಾಗುವಂತಿದೆ.

## ೫. ಪ್ರಸಂಗಾವಧಾನ

೧೯೧೬ ರಲ್ಲಿಯ ಒಂದು ಸಂಗತಿ. ಲೋಕಮಾನ್ಯರು ಗದುಗಿಗೆ ಕೆಲವೊಂದು ಸ್ವಂತದ ಕೆಲಸಕ್ಕಾಗಿ ದಯಮಾಡಿಸಿದ್ದರು. ಆಗ ಆ ಊರ ಪ್ರಮುಖರಾದ ಡಾ. ಉಮಚಗಿ ಡಾ. ಹುಯಿಲಗೋಳ ಪ್ರಭೃತಿಗಳು ಲೋಕಮಾನ್ಯರಿದ್ದೆಡೆಗೆ ಹೋಗಿ, ಒಂದು ಉಪನ್ಯಾಸವನ್ನು ಕೊಡಲು ಬಿನ್ನವಿಸಿದರು. ಆದರೆ "ನನ್ನ ಮರಾಠಿ ಭಾಷಣಗಳು ಇಲ್ಲಿಯವರಿಗೆ ಹೇಗೆ ತಿಳಿಯಬೇಕು?" ಎಂದು ಲೋಕಮಾನ್ಯರು ಉಸುರಿದರು. ಅದಕ್ಕೆ ಪ್ರತ್ಯುತ್ತರವಾಗಿ ಊರ ಪ್ರಮುಖರು "ಇಲ್ಲಿಯ ಜನಗಳೆಲ್ಲ ತಮ್ಮ ದರ್ಶನೋತ್ಸುಕರಾಗಿ ಕಾದುಕೊಂಡು ಕುಳಿತಿದ್ದಾರೆ; ಆದುದರಿಂದ ತಾವು ನಮ್ಮೂರವರ ಅಳಲಿ ಭಕ್ತಿಯ ಸನ್ಮಾನವನ್ನು ಸ್ವೀಕರಿಸುವುದಾಗಲಿ" ಎಂದು ಬೇಡಿಕೊಂಡುದಕ್ಕೆ ಲೋಕಮಾನ್ಯರು ಒಪ್ಪಿಕೊಂಡರು.

ಇತ್ತ ಮಧ್ಯಾಹ್ನದಲ್ಲಿ ಅಲ್ಲಿಯ ಮಾಮಲೆದಾರರಾದ ಶ್ರೀ. ಪಡಿಬಿದರಿಯವರು ಸಭೆಯನ್ನು ವಿರಚಿಸದಿರಲಿಕ್ಕೆ ಹೇಳಿದರು. ಊರ ಪ್ರಮುಖರು ಆ ಮಾತಿಗೆ ಒಪ್ಪದ್ದಕಾರಣ ಮಾಮಲೇದಾರರು ಸಭೆಯನ್ನು ನಿಲ್ಲಿಸಿಬಿಡುವ ಅಪ್ಪಣೆ ಕೊಡುವೆನೆಂದೂ ಹೆದರಿಕೆ ಹಾಕಿದರು. ಅಂದು ಜಿಲ್ಲೆಯ ಕಲೇಕ್ಟರ ಮಿ. ಟರ್ನರರು ಗದುಗಿನಲ್ಲಿಯೆ ತಂಗಿದ್ದರು. ಗೊತ್ತಾದ ವೇಳೆಗಿಂತ ಎಷ್ಟೋ ಹೊತ್ತು ಮೊದಲೆ ಸಭಾಸ್ಥಾನದಲ್ಲಿ ೧೦–೧೨ ಸಾವಿರ ಜನಸಮುದಾಯವು ಕಿಕ್ಕಿರಿದಿತ್ತು. ಲೋಕಮಾನ್ಯರು ಸಭೆಗೆ ಬರುವ ಮೊದಲೆ ಮಿ. ಪಡಿಬಿದಿರಿಯವರು ಬಂದು ಜನರನ್ನು ಚದರಿಸಿಬಿಟ್ಟರು; ಮುಂದಾಳುಗಳಿಗೆ ವ್ಯಾಸಪೀಠವನ್ನು ಕಿತ್ತೊಗೆಯಲಿಕ್ಕೆ ಆಜ್ಞಾಪಿಸುತ್ತಲೆ ಅವರು ಬಾಯ್ಮಾತು ಬೇಡ; ನಿಮ್ಮ ಕಟ್ಟಪ್ಪಣೆಯನ್ನು ಬರೆದು ಕೊಡಿರೆಂದರು. "ನನ್ನ ಬಾಯ್ಮಾತೇ ಬರೆದಪ್ಪಣೆಯೆಂದು ತಿಳಿಯಿರಿ. ನಾನು ಫರ್ಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟನಿದ್ದೇನೆ" ಎಂದು ಆರ್ಭಟಿಸಿದರು. "ಬೇಕಾದರೆ ನೀವೆ ವ್ಯಾಸಪೀಠವನ್ನು ಎತ್ತಿಸಿರಿ; ನಾವದನ್ನು ಕಿತ್ತಲಾರೆವು" ಎಂದು ಮುಂದಾಳುಗಳು ಮರುನುಡಿದರು. ಮಾಮಲೇದಾರ ಸಾಹೇಬರು ತಾವೇ ಅದನ್ನು ಕಿತ್ತಿಸಿದರು.

ಸಭೆಯ ಚಾಲಕರು ಈ ಸಂಗತಿಯನ್ನು ಲೋಕಮಾನ್ಯರಿಗೆ ಅರುಹಿ ಸಭೆಯಂತೂ ಜರುಗಲೇಬೇಕೆಂದು ತಮ್ಮ ಇಚ್ಛೆಯಿರುವುದಾಗಿ ವಿಜ್ಞಾಪಿಸಿಕೊಂಡರು. ಅನಾಯಾಸವಾಗಿ ತಮ್ಮೂರಿಗೆ ಬಂದ ವಂದ್ಯ ಮಹಾ ಪುರುಷನಿಗೆ ಆದರ ಸತ್ಕಾರವನ್ನು ಸ್ವೀಕರಿಸಲಿಕ್ಕೆ ಔತನವನ್ನು ಕೊಟ್ಟು ಏನಾದರೊಂದು ನಿಮಿತ್ತದಿಂದ ಅದನ್ನು ಮಾಡದೆ ಬಿಡುವುದರಿಂದ ತಮ್ಮ ಹಾಗೂ ಆ ಮಾನ್ಯ ಅತಿಥಿಯ ಗೌರವಕ್ಕೆ ಕುಂದು ಬಂದಂತಾಗುವುದೆಂದು ತಿಳಿದು ಊರ ಪ್ರಮುಖರು ಏನೇ ಆಗಲಿ ಸಭೆಯು ಆಗುವುದೇ ಯುಕ್ತವೆಂದು ಆಗ್ರಹಪಟ್ಟರು. ಲೋಕಮಾನ್ಯರು ಅವರಿಗೆ, ನೀವೇನೂ ಹಾಗೆ ಭಾವಿಸಿಕೊಳ್ಳಬೇಡಿರಿ, ನನಗೆ

ಇಂತಹ ಪ್ರಕಾರಗಳು ಹೊಸವಲ್ಲ; ಎಂದು ಮುಂತಾಗಿ ಸಮಾಧಾನದ ಮಾತುಗಳನ್ನು ಹೇಳಿ ನಿಮಗೆ ಬರೆಹದಪ್ಪಣೆಯು ಬಂದಿದೆಯೆ ಎಂದು ಪ್ರಶ್ನಿಸಿದರು. ಅದಾವುದೂ ಇಲ್ಲವೆಂದು ತಿಳಿಯುತ್ತಲೆ ಲೋಕಮಾನ್ಯರು ನುಡಿದರು. ಹಾಗಾದರೆ ಅತ್ಯಗತ್ಯವಾಗಿ ಸಭೆಯನ್ನು ವಿರಚಿಸಿರಿ; ನಾನೊಪ್ಪಿಕೊಂಡಂತೆ ತಾಂಬೂಲ ಸಮಾರಂಭಕ್ಕೆ ಬರುವೆನು; ಅಲ್ಲಿ ಬಾಯ ಅಥವಾ ಬರೆಹದ ಅಪ್ಪಣೆಯು ಬಂದರೂ ಅದನ್ನು ನಾನು ನೋಡಿಕೊಳ್ಳುವೆನು.''

ಮತ್ತೆ ಸಭೆಯು ಸೇರಿತು, ಲೋಕಮಾನ್ಯರು ದಯಮಾಡಿಸಿದರು. ಅಧಿಕಾರಿಗಳೂ ಕೂಡಲೆ ಬರಹದಪ್ಪಣೆಯನ್ನು ಅವರ ಕೈಗೆ ಕೊಟ್ಟರು. ಲೋಕಮಾನ್ಯರು ಅದನ್ನು ಶಾಂತರೀತಿಯಿಂದ ಓದಿಕೊಂಡಬಳಿಕ "ಇದರಲ್ಲೇನಿದೆ?'' ಎಂದು ನಸುನಕ್ಕು ಮುಂದೆ ನುಡಿದರು. "ಈ ಅಪ್ಪಣೆಯಲ್ಲಿ ನಾನು ತಾಂಬೂಲವನ್ನು ಸ್ವೀಕರಿಸಕೂಡದೆಂದು ಎಲ್ಲಿದೆ? ಚಿತ್ತಕ್ಷೋಭಕ ಉಪನ್ಯಾಸ ಮಾಡಬಾರದೆಂದು ಮಾತ್ರ ವಿಧಿಸಿದೆ. ನಾನು ತಮ್ಮ ಅಪ್ಪಣೆಯನ್ನು ಶಿರಸಾ ವಹಿಸಲು ಸಿದ್ಧನಿದ್ದೇನೆ. ಚಿತ್ತಕ್ಷೋಭಕ ವ್ಯಾಖ್ಯಾನಗಳನ್ನು ಹೇಳಲು ನಾನಿಲ್ಲಿ ಬಂದಿಲ್ಲ. ಚಿತ್ತಕ್ಷೋಭಕ ಅಂದರೇನು ಎಂಬುದನ್ನು ನಾನು ಚನ್ನಾಗಿ ಬಲ್ಲೆ; ಅಲ್ಲದೆ ನನ್ನ ಉಪನ್ಯಾಸವು ಚಿತ್ತಕ್ಷೋಭಕವಾಗಿತ್ತೆಂದು ನೀವೇ ಸಿದ್ಧಪಡಿಸಬೇಕಾದೀತೆಂಬುದು ಮಾತ್ರ ನೆನಪಿರಲಿ.'' ಲೋಕಮಾನ್ಯರ ಕುಶಾಗ್ರಬುದ್ಧಿಯ ಹಾಗೂ ಪ್ರಸಂಗಾವಧಾನ ಜಾಣ್ಮೆಯ ಚತುರೋಕ್ತಿಗಳನ್ನು ಕೇಳುತ್ತಲೆ ಮಾಮಲೇದಾರರು ಬುದ್ಧಿಶೂನ್ಯರಾದರು. ಮುಂದೇನು ಮಾಡಬೇಕೆಂಬುದು ತಿಳಿಯದಾಯಿತವರಿಗೆ. "ಕಲೇಕ್ಟರರ ಪೇಡು ಇಲ್ಲಿಯೆ ಇದೆ'' ಮಾಮಲೇದಾರರು ಉಸುರಿದರು "ನಾನವರಿಗೆ ಕೇಳಿಬರುತ್ತೇನೆ; ಸ್ವಲ್ಪ ತಡೆಯುವಿರಾ?'' ಲೋಕಮಾನ್ಯರು ಅದಕ್ಕೆ ಸಮ್ಮತಿಸಲು ಮಾಮಲೇದಾರರು ಕಲೇಕ್ಟರರನ್ನು ಕಾಣಹೋದರು. ತಾಂಬೂಲ ಸಮಾರಂಭಕ್ಕೆ ಅಡ್ಡೀ

ಮಾಡುವುದು ಅನುಚಿತವೆಂದು ತೋರುವಂತಿತ್ತು. ಆಗ ಕಲೇಕ್ಟರರು ಮಾಮಲೇದಾರರ ಮೇಲೆ ತುಂಬಾ ರೇಗಿದರಂತೆ. ಈ ಸಭೆಯನ್ನು ನೀವೇ ಏಕೆ ನಿಲ್ಲಿಸಲಿಲ್ಲವೆಂಬ ಕಲೇಕ್ಟರರ ಪ್ರಶ್ನೆಗೆ ತಾವು ಇಲ್ಲಿರುವಾಗ ನಾನೇಕೆ ಆ ಹೊಣೆಯನ್ನು ಹೊರಲಿ ಎಂದು ಮಾಮಲೇದಾರರು ಮರುನುಡಿದರೆಂದು ಕೇಳಿಕೆ. ಅದೇನೆ ಇದ್ದರೂ ತಾಂಬೂಲ ಸಮಾರಂಭಕ್ಕೆ ಅಡ್ಡಿಯಿಲ್ಲ ಐದು ಮಿನೀಟು ಉಪನ್ಯಾಸ ಮಾಡಬಹುದು ಎಂಬುದಾಗಿ ಕಲೇಕ್ಟರರಿಂದ ಒಪ್ಪಿಗೆ ಬಂದಿತು. "ಐದು ಮಿನೀಟಿನ ಅರ್ಥವೇನು?" ಲೋಕಮಾನ್ಯರು ಮಾಮಲೇದಾರರಿಗೆ ಕೇಳಿದರು "ಸಭೆಯು ಆರಂಭವಾದಬಳಿಕ ಐದು ಮಿನೀಟಿನಲ್ಲಿ ತೀರಬೇಕೊ ಅಥವಾ ನನ್ನ ಭಾಷಣವು ಆ ಅವಧಿಯಲ್ಲಿ ಮುಗಿಯಬೇಕೊ?" "ತಾವು ಐದು ಮಿನೀಟು ಮಾತಾಡಬಹುದು" ಎಂದು ಮಾಮಲೇದಾರರು ಹೇಳಿದರು. ಆಗ ಲೋಕಮಾನ್ಯರು "ನಾನು ಮಿನೀಟಿಗೆ ಎಂಭತ್ತು ಶಬ್ದಗಳನ್ನು ಆಡುತ್ತೇನೆ. ಐದು ಮಿನೀಟು ಅಂದರೆ ಕೇಸರಿಯ ಎರಡೂವರೆ ಕಾಲಂಮಿನಷ್ಟು ವಿಷಯವು ಆಯಿತೆಂಬುದು ಈ ಪ್ರಾಣಿಗಳಿಗೇನು ಗೊತ್ತು?" ಎಂದು ವಿನೋದವಾಗಿ ವಿಜಯಧ್ವನಿಯಲ್ಲಿ ನುಡಿದರು. ಸಭೆಗೆ ಆರಂಭವಾಯಿತು. ಅಲ್ಲಿದ್ದ ಪೋಲೀಸ ಸುಪರಿಂಟೆಂಡೆಂಟ ಮತ್ತು ಮಾಮಲೇದಾರರನ್ನು ಲೋಕಮಾನ್ಯರು ವ್ಯಾಸಪೀಠದ ಮೇಲೆ ಕರೆದರು. ಆದರೆ ಅವರಿಗೆ ಬರಲು ಧೈರ್ಯವಿರಲಿಲ್ಲ. ಲೋಕಮಾನ್ಯರ ಭಾಷಣವಾಯಿತು. ಸಭೆಯು ಯಾವ ಎಡೆತಡೆಗಳಿಲ್ಲದೆ ಶಾಂತವಾಗಿ ಕೊನೆಗೊಂಡಿತು.

## ೬. ಸ್ಪಷ್ಟೋಕ್ತಿ

೧೯೦೬ ನೆಯ ಇಸವಿಯಲ್ಲಿ ಒಮ್ಮೆ ಲೋಕಮಾನ್ಯರು ಗುರ್ಲಹೊಸೂರಿಗೆ (ಬೆಳಗಾಂವಿ ಜಿಲ್ಲೆ) ದಯಮಾಡಿಸಿದ್ದರು. ಆಗ ಅಲ್ಲಿ ಶ್ರೀ. ಚಿದಂಬರಸ್ವಾಮಿಯ ಜಾತ್ರೆ ಬೇರೆ. ಲೋಕಮಾನ್ಯರ ಆಗಮನವಾಗತಕ್ಕದ್ದೆಂದು ಕೇಳಿ ಇನ್ನಿಷ್ಟು ಜನಸಮುದಾಯಕ್ಕೆ ಉಕ್ಕು

ಬಂದಿತು. ಅಂದಿನ ಇರುಳು ಶ್ರೀ. ಚಿದಂಬರ ದೇವಾಲಯದ ಹೊರ ಮಗ್ಗಲಿನ ವಿಸ್ತಾರವಾದ ಬೈಲಲ್ಲಿ ಪ್ರಚಂಡ ಸಭೆಯು ಸೇರಿತು. ೧೫-೨೦ ಸಾವಿರಕ್ಕೆ ಮಿಕ್ಕಿ ಮಂದಿ ಕೂಡಿತ್ತು. ಲೋಕಮಾನ್ಯರು ಒಂದು ತಾಸಿನವರೆಗೆ ಅವ್ಯಾಹತವಾಗಿ ಸ್ಫೂರ್ತಿದಾಯಕ ಉಪನ್ಯಾಸ ಮಾಡಿದರು. ಆದರೆ ಸಭೆಗೆ ಬಂದ ಮಂದಿಯೆಲ್ಲ ಚಿತ್ರದ ಗೊಂಬೆಯಂತೆ ಸದ್ದಿಲ್ಲದೆ ಮಿಸುಕಾಡದೆ ಕುಳಿತಿತ್ತು. ಇದು ಲೋಕಮಾನ್ಯರ ಮನಸಿಗೆ ತುಂಬಾ ವಿಷಾದವನ್ನುಂಟು ಮಾಡಿತು. ತಮಗೆ ಇಲ್ಲಿಯ ಭಾಷೆ ಬಾರದುದಕ್ಕೆ ಮರಾಠಿಯಲ್ಲಿ ಮಾತನಾಡಬೇಕಾಯಿತು. ಆದರೆ ಅದೆಲ್ಲ ಬೋರ್ಗಲ್ಲ ಮೇಲೆ ಮಳೆಗರೆದಂತಾಯಿತು. ಆದಕಾರಣ ಕನ್ನಡದಲ್ಲಿ ತಮ್ಮ ಭಾಷಣದ ಸಾರಾಂಶವನ್ನು ಹೇಳುವುದಕ್ಕಾಗಿ ಕರ್ನಾಟಕದ ಧುರೀಣರಾದ ಶ್ರೀ. * * ರಾಯರಿಗೆ ಸೂಚಿಸಿದರು. ಆದರೆ ರಾಯರು **ತಮಗೆ ಅಷ್ಟು ಕನ್ನಡವು ಬರುವದಿಲ್ಲವೆಂದುದರಿಂದ** ಆ ಕೆಲಸವು ಅವರ ಒಬ್ಬ ಮಿತ್ರನಿಂದ ನೆರವೇರಿತು. ಅವನು ಕನ್ನಡದಲ್ಲಿ ಸಾರಾಂಶವನ್ನು ಹೇಳಿದಬಳಿಕ ಸಭಾವಿಸರ್ಜನೆಯಾಗಿ ಎಲ್ಲರೂ ಮನೆಗೆ ಹೋದರು.

ಆಗ ರಾತ್ರಿ ಸುಮಾರು ಎಂಟು ತಾಸು ಮಿರಿದ್ದವು. ಆದರೂ ಲೋಕಮಾನ್ಯರಿಗೆ ಆ ಸಭಾಪ್ರಸಂಗದಿಂದ ತಲೆಯಲ್ಲಿ ಬಂದ ಅನೇಕಾನೇಕ ವಿಚಾರಗಳಿಂದ ನಿದ್ರೆಯು ವಿಚಾರವು ಹಿಂದುಳಿಯಿತು. ಲೋಕಮಾನ್ಯರು ಶ್ರೀ. * * ರಾಯರನ್ನು ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡರು. ನಿಜವಾದ ಲೋಕಸೇವೆಯ ಕಳವಳದಿಂದಲೂ ತಮ್ಮ ಒಬ್ಬ ಅದ್ಭುತ ಕಾರ್ಯಶಕ್ತಿಯುಳ್ಳ ಅನುಯಾಯಿ ಮಿತ್ರನ ಮೇಲಿನ ಪ್ರೇಮದಿಂದಲೂ ಅಂತಃಕರಣವು ತುಂಬಿ ಬಂದು ಶ್ರೀ. * * ರಾಯರೊಂದಿಗೆ ದೇಶಸೇವೇಚ್ಛುಗಳಿಗೆ ಅತ್ಯಂತ ಮಹತ್ವದ ವಿಚಾರಗಳ ಚರ್ಚೆಯನ್ನು ಆರಂಭಿಸಿದರು.

ಲೋಕಮಾನ್ಯ:— ಇಂದಿನ ಸಭೆಗೆ ಹೆಚ್ಚಾಗಿ ಯಾವ ಜನರು ಬಂದಿದ್ದರು?

ರಾಯರು:— ಲಿಂಗವಂತರು.

ಲೋಕಮಾನ್ಯ:— ಯಾವ ಪ್ರಾಂತದಲ್ಲಿ ಸಾರ್ವಜನಿಕ ಚಳವಳಿಯನ್ನು ಮಾಡಬೇಕೆಂದು ನಿಮ್ಮ ಮನಸಿನಲ್ಲಿದೆ?

ರಾಯರು:— ಅರ್ಥಾತ್ ಇದೇ ಈ ಕರ್ನಾಟಕದಲ್ಲಿ.

ಲೋಕಮಾನ್ಯ:— ಹಾಗಿದ್ದ ಪಕ್ಷದಲ್ಲಿ ನೀವು ಎರಡು ಸಂಗತಿಗಳನ್ನು ಆಚರಣೆಯಲ್ಲಿ ತರಲಿಕ್ಕೆಬೇಕು. ನೀವು ಮಾಡತಕ್ಕ ಮೊಟ್ಟ ಮೊದಲನೆಯ ಮಾತೇನಂದರೆ: ವೀರಶೈವ ಧರ್ಮದ ಉದ್ಗ್ರಂಥಗಳನ್ನು ಚೆನ್ನಾಗಿ ಪರಿಶೀಲಿಸಿ, ಆ ಧರ್ಮದ ಉದಾರತತ್ವಗಳ ಅಭ್ಯಾಸವನ್ನು ಆದರಪ್ರೀತಿಪೂರ್ವಕವಾಗಿ ನಡೆಯಿಸಿರಿ: ಹೀಗೆ ಮಾಡುವುದರಿಂದ ಆ ಜನಾಂಗದ ಬಗ್ಗೆ–ಆ ಜಾತಿಯ ಬಗ್ಗೆ ನಮ್ಮಲ್ಲಿ ಪ್ರೀತಿ ವಿಶ್ವಾಸಗಳುಂಟಾಗಿ ನಮ್ಮ ಕಾರ್ಯಕ್ಕೆ ಅದರ ಸಹಾನುಭೂತಿ ಸಹಕಾರವೂ ದೊರೆಯುವುದು. ಇಲ್ಲದಿದ್ದರೆ ನಿರರ್ಥಕವಾಗಿ ಪರಸ್ಪರರಲ್ಲಿ ತಪ್ಪು ತಿಳುವಳಿಕೆಗಳುಂಟಾಗುವವು. ಶ್ರೀ. ಪಾಠಕ ಎಂಬವರಿಗೆ ಜೈನ ಧರ್ಮದ ತತ್ವಜ್ಞಾನವು ಚೆನ್ನಾಗಿ ಗೊತ್ತಿರುವುದರಿಂದ ಅವರ ವಿಷಯಕ್ಕೆ ಆ ಜನರಲ್ಲಿ ಎಷ್ಟು ಪೂಜ್ಯ ಬುದ್ಧಿಯಿದೆಯೆಂಬುದನ್ನು ನಾನು ಬಲ್ಲೆ. ನೀವು ಕೈಕೊಳ್ಳತಕ್ಕ ಇನ್ನೊಂದು ಸಂಗತಿ: ನೀವು ಕನ್ನಡದಲ್ಲಿ ಮಾತನಾಡಲಿಕ್ಕೆಬೇಕು. ಏಕೆಂದರೆ ನಾವು ಯಾವ ಜನರನ್ನು ತಿದ್ದಿ ತಿಳಿಹೇಳಿ ಮೇಲಕ್ಕೆ ತರಬೇಕೆನ್ನುತ್ತಿರುವೆವೊ ಆ ಜನರ ಭಾಷೆಯು ನಮಗೆ ಬಾರದಿದ್ದರೆ ಹೇಗೆ? ಆದಕಾರಣ ಕನ್ನಡದ ಜ್ಞಾನವು ನಿಮಗೆ ಅತ್ಯಂತ ಅವಶ್ಯಕವಾಗಿದೆ.

ಮರುದಿನ ಬೈಲಹೊಂಗಲದಲ್ಲಾದ ಲೋಕಮಾನ್ಯರ ಭಾಷಣದ ಇತ್ಯರ್ಥವನ್ನು ಕನ್ನಡದಲ್ಲಿ ಶ್ರೀ. * * ರಾಯರೇ ಹೇಳಿದರು. ಅವರ ಕನ್ನಡ ಭಾಷಣವನ್ನು ಕೇಳಿ ಸಭಿಕರಲ್ಲುಂಟಾದ ಆವೇಶ ಉತ್ಸಾಹಗಳನ್ನು ನೋಡಿ ಲೋಕಮಾನ್ಯರೂ ಹಿಗ್ಗಿದರು.

## ೭. ಭಾಷಾಭಿಮಾನ

ಹಿಂದುಸ್ಥಾನದ ಅನೇಕ ಪ್ರಾಂತಗಳಲ್ಲಿ ಲೋ. ಟಿಳಕರು ಎಷ್ಟೋ ವರ್ಷಗಳವರೆಗೆ ನಾ. ಗೋಖಲೆ, ಸುರೇಂದ್ರನಾಥ ಬಾನರ್ಜಿ ಮೊದಲಾದವರಷ್ಟು ಪ್ರಖ್ಯಾತರಾಗಿರಲಿಲ್ಲ; ಇದಕ್ಕೆ ಕಾರಣವು ಲೋಕಮಾನ್ಯರ ಸ್ವಭಾಷಾಭಿಮಾನವೆ. ಇಂಗ್ರೇಜಿಯಲ್ಲಿ ಲೇಖ ಬರೆವುದರಿಂದಲೂ ಉಪನ್ಯಾಸ ಮಾಡುವುದರಿಂದಲೂ ಸಿಕ್ಕುವಷ್ಟು ಪ್ರಸಿದ್ಧಿಯು ದೇಶಭಾಷೆಯ ಮುಖಾಂತರ ಕೆಲಸಮಾಡುವುದರಿಂದ ದೊರೆಯಲಾರದೆಂದು ಬೇರೆ ಹೇಳಬೇಕಾಗಿಲ್ಲ. ಕೀರ್ತಿ, ಖ್ಯಾತಿ ಬೆಳೆಯುವ ಮಾತಂತೂ ಒತ್ತಟ್ಟಿಗಿರಲಿ, ಲೋಕಮಾನ್ಯರು ಮರಾಠಿ ಭಾಷೆಯ ಮೂಲಕವಾಗಿಯೆ ಮುಖ್ಯವಾಗಿ ತಮ್ಮ ಎಲ್ಲ ಕಾರ್ಯವನ್ನು ಮುಂದುವರಿಸಿದುದರಿಂದ ಅವರ ಬಗ್ಗೆ ಅನೇಕ ತಪ್ಪು ಕಲ್ಪನೆಗಳನ್ನು ಹಬ್ಬಿಸಲಿಕ್ಕೆ ಅವರ ವಿರೋಧಿಗಳಿಗೆ ಅನುಕೂಲವಾಯ್ತು. ಆದರೂ ತಾವು ಕೈಕೊಂಡ ಕೆಲಸವು ಸತ್ಯವಾಗಿದ್ದರೆ ಅದು ಯಶಸ್ವಿಯಾಗಲಿಕ್ಕೇಬೇಕು ಎಂಬ ಆತ್ಮವಿಶ್ವಾಸದಿಂದ ದೇಶಸೇವೆಯನ್ನು ನಡಿಸಿದ್ದರು.

ಈ ಸಂಬಂಧದಿಂದಲೆ ಒಮ್ಮೆ ಮಾತಿಗೆ ಮಾತು ಬಂದಾಗ ದೇ. ಭ. ಕಾಕಾ ಕಾಲೇಲಕರರೆದುರು ಲೋಕಮಾನ್ಯರು ನುಡಿದಿದ್ದೇನಂದರೆ:

ನಾನು ಕೇಸರೀ ಪತ್ರವನ್ನು ಕೈಕೊಂಡಾಗ ದೇಶಭಾಷೆಯಲ್ಲಿ ಏಕೆ ವರ್ತಮಾನಪತ್ರವನ್ನು ಆರಂಭಿಸುವಿರಿ, ನಿಮ್ಮ ಪತ್ರಿಕೆಯನ್ನು ಯಾರೂ ಕೇಳಲಿಕ್ಕೂ ಇಲ್ಲ ಎಂದು ಜನರು ಆಡಹತ್ತಿದರು. ಆದರೆ ನಾವು ದೃಢನಿಶ್ಚಯವನ್ನು ಪ್ರಕಟಿಸಿದೆವು. ಆಗ ಅವರು, 'ಹಾಗಾದರೆ ಕೊನೆಗೆ ಎರಡು ಕಾಲಮುಗಳನ್ನಾದರೂ ಇಂಗ್ರೇಜಿ ಲೇಖನಗಳಿಗಾಗಿ ಕಾದಿಡಿರಿ' ಎಂದು ಆಗ್ರಹಪಡಿಸಿದರು. ಆದರೆ ನಾವು ಇದು ಸಾಧ್ಯವೇ ಇಲ್ಲ; ಕೇಸರಿಯು ಜನರ ಸಲುವಾಗಿ ಇದೆ; ಆದಕಾರಣ ಜನರು

ಕೇಸರಿಯು ಸ್ವಾಗತವನ್ನು ಮಾಡಿಯೇ ಮಾಡುವರು; ಎಂದು ಸ್ಪಷ್ಟವಾಗಿ ಹೇಳಿದೆವು. ಆದರಂತೆ ಇಂದು ಮರಾಠಾ ಎಂಬ ಇಂಗ್ಲಿಷ ಪತ್ರಿಕೆಯನ್ನು ಕೇಸರಿಯು ಉತ್ಪನ್ನಿನೊಳಗಿಂದ ನಡಿಸಬೇಕಾಗುತ್ತಿದೆ. ಕೇಸರಿಯನ್ನು ಮೊದಲು ಮಾಡಿದಾಗ ಹೊಸ ಭಾಷೆಯನ್ನೇ ಉಂಟು ಮಾಡಬೇಕಾಯಿತು. ರಾಜಕೀಯ ವಿಷಯದ ಪರಿಭಾಷೆಯನ್ನು ಸಿದ್ಧ ಪಡಿಸಬೇಕಾಯ್ತು. ಹಳೆಯ ಮರಾಠಿಯಲ್ಲಿ ಭಕ್ತಿ ಮತ್ತು ವೇದಾಂತ ಇದೆ; ಲಾವಣಿಕಾರರು ಮತ್ತು ಗೊಂದಲಿಗರು ಅದರಲ್ಲಿ ವೀರ ರಸದ ಮಾತುಗಳನ್ನು ತಂದರು; ಆದರೆ ರಾಜ್ಯಕಾರ್ಯದ ಗಂಭೀರವಾದ ಚರ್ಚೆ, ವಾದವಿವಾದ, ವಿನೋದ ಉಪಹಾಸ, ಮೊನೆಮಾತು, ಮೂದಲಿಸುವ ಮಾತು, ಇವೆ ಮೊದಲಾದವುಗಳನ್ನೆಲ್ಲ ಮಾಡಲು ನಮಗೆ ಹೊಸದಾಗಿ ಭಾಷೆಯನ್ನೆ ನಿರ್ಮಿಸಬೇಕಾಯ್ತು. ಯಾವ ಮನುಷ್ಯನಲ್ಲಿ ಉತ್ಕಟ ಇಚ್ಛಾಶಕ್ತಿಯು ಇರುವದೊ ಅವನು ಸಹಜವಾಗಿ ಭಾಷೆಯನ್ನು ನಿರ್ಮಿಸಬಲ್ಲನು.

ಲೋಕಮಾನ್ಯರ ಈ ನುಡಿಗಳನ್ನು ಕೇಳಿಕೊಂಡಬಳಿಕ ಶ್ರೀ. ಕಾಲೇಲಕರರೂ ಈ ವಿಷಯದಲ್ಲಿ ತಾವು ಕಣ್ಣಾರೆ ಕಂಡ ಮ. ಗಾಂಧಿಯವರ ಉದಾಹರಣವನ್ನು ಹೇಳಿ ಆ ಮಾತನ್ನೇ ಪುಷ್ಟೀಕರಿಸಿದರು. ಅವರು ಅಂದುದೇನೆಂದರೆ:

ಅಹುದು ತಾವು ಹೇಳಿದುದು ಅಕ್ಷರಶಃ ಸತ್ಯವಾಗಿದೆ. ಗಾಂಧಿಯವರೇನು ಗುಜರಾಥಿಯ ಮಹಾ ಪಂಡಿತರಲ್ಲ. ಆದರೂ ಅವರು ಗುಜರಾಥಿಯಲ್ಲಿ ನವಜೀವನವನ್ನೇ ಎರೆದಿದ್ದಾರೆ. ಅವರ ಲೇಖನ ಭಾಷಣಗಳಿಂದ ಗುಜರಾಥಿಯು ಒಂದು ವೀರ ಜನಾಂಗದ ವೀರವಾಣಿ ಎನಿಸಿಕೊಳುತ್ತಿದೆ.

ಆಗ ಅದಕ್ಕೆ "ನಿಜ; ನಾನದನ್ನು ನೋಡಿದ್ದೇನೆ" ಎಂದು ಲೋಕಮಾನ್ಯರೂ ತಲೆದೂಗಿ ಮುಂದೆ ನುಡಿದುದೇನಂದರೆ: ನನಗೆ

ಗುಜರಾಥಿ ಮಾತನಾಡಲು ಬರುವದಿಲ್ಲ; ಆದರೆ ಅಚ್ಚಾದುದನ್ನು ಓದಬಲ್ಲೆ.

## ೮. ಆತ್ಮವಿಶ್ವಾಸ

೧೯೦೭ ರಲ್ಲಿ ಸುರತ ಕಾಂಗ್ರೆಸ್ಸಿನ ಸಮಯ. ಮಹಾಸಭೆಯ ಮುನ್ನಾದಿನ ರಾತ್ರಿ ಒಬ್ಬ ಅನುಯಾಯಿಯು ಲೋಕಮಾನ್ಯರ ಹತ್ತಿರ ಬಂದು, ನಾಳೆ ತಮಗೆ ಹೊಡೆಯಬೇಕೆಂದು ಕೆಲವರು ಹೊಂಚು ಹಾಕಿದ್ದಾರೆ. ಆದಕಾರಣ ಅದಕ್ಕೆ ಪ್ರತಿಯಾಗಿ ಏನು ಉಪಾಯ ಮಾಡಬೇಕೆಂಬುದರ ಅಪ್ಪಣೆಯಾಗಲಿ, ಎಂದು ಬಿನ್ನವಿಸಿದನು. ಆಗ ಲೋಕಮಾನ್ಯರು ತಟ್ಟನೆ ನುಡಿದುದೇನಂದರೆ, "ಹೊಡೆಯಲಿ; ಕೈಯಾರೆ ಹೊಡೆಯಲಿ; ನಾನು ಕೈಕೊಂಡಿರುವುದು ಸತ್ಕಾರ್ಯವು. ನನಗೆ ಹೊಡೆಯುವ ಶಕ್ತಿ ಅದಾವನಿಗೆ? ನಮ್ಮ ಸಂರಕ್ಷಣೆಯನ್ನು ಮಾಡುವುದಕ್ಕೆ ಪರಮೇಶ್ವರನು ಸಿದ್ಧನಿದ್ದಾನೆ."

ಮರುದಿನ ಹೊಂಚುಗಾರರು ಮಂಟಪದಲ್ಲಿ ಹೊಕ್ಕು ಪುಂಡಾಟಕ್ಕೆ ಆರಂಭಿಸಿದರು. ಲೋಕಮಾನ್ಯರಿಗೆ ಎಲ್ಲರೂ ಬೇಡಿಕೊಂಡರು, ಮಹಾಸ್ವಾಮಿ ಹಿಂಭಾಗದಲ್ಲಿ ಬಿಡಾರಕ್ಕೆ ನಡೆಯಿರೆಂದು. ಲೋಕಮಾನ್ಯರು ಧೀರ ಗಂಭೀರ ವೃತ್ತಿಯಿಂದ ವ್ಯಾಸಪೀಠದ ಮೇಲೆಯೆ ನಿಂತು 'ನಾನು ಹೆಂಗಸರ ಬಾಗಿಲಿನಿಂದ ಓಡಿ ಹೋಗುವವನಲ್ಲ. ಈಶಸಂಕಲ್ಪವಿದ್ದಂತೆ ಆಗುವುದು ಆಗಲಿ." ಎಂದು ಹೇಳಿದರು.

## ೯. ಬುದ್ಧಿವಂತಿಕೆ

ಲೋಕಮಾನ್ಯರ ಹಿರಿಮಗನು ವಿಶ್ವನಾಥರಾಯನು ೧೯೦೩ ರಲ್ಲಿ ಪ್ರಿವ್ಹಿಯಸ್ ಕ್ಲಾಸಿನಲ್ಲಿದ್ದನು. ಅದೇ ವರ್ಷ ಪ್ರಿನ್ಸಿಪಾಲ ಪರಾಂಜಪೆಯವರು ವಿಲಾಯತಿಯಿಂದ ಸಿನಿಯರ ರಾಂಗ್ಲರಾಗಿ ಗಣಿತ ಶಾಸ್ತ್ರದಲ್ಲಿ ಅತಿ ನಿಷ್ಣಾತರೆಂದು ಮಾನ್ಯತೆಯನ್ನು ಪಡೆದು ಬಂದಿದ್ದರು. ಅವರೆ ಪ್ರಿವ್ಹಿಯಸ್ ಕ್ಲಾಸಿಗೆ ಗಣಿತವನ್ನು ಹೇಳುತ್ತಿದ್ದರು.

ಒಂದು ದಿಸ ವಿಷಯವನ್ನು ಹೇಳುತ್ತಿರುವಾಗ ಒಂದು ಗಡಚಾದ ಪ್ರಶ್ನೆಯು ತತ್‌ಕ್ಷಣದಲ್ಲಿ ಪ್ರಿ. ಪರಾಂಜಪೆಯವರಿಗೆ ಬಗೆಹರಿಯಲಿಲ್ಲ. ನಾನು ನಾಳೆ ನೋಡಿಕೊಂಡು ಬಂದು ತಿಳಿಸುವೆನು ಎಂದು ಹೇಳಿ ಪ್ರಿನ್ಸಿಪಾಲರು ಹೊರಟು ಹೋದರು. ಮರುದಿಸ ಕ್ಲಾಸಿಗೆ ಬರುವ ಮುನ್ನ ವಿಶ್ವನಾಥರಾಯನು ತಮ್ಮ ತಂದೆಗೆ ಅದೇ ಗಣಿತ ಪ್ರಶ್ನೆ ಯನ್ನು ಕೇಳಲು ಟಿಳಕರು ಅದನ್ನು ಮೂರೇ ಮೆಟ್ಟಿನಲ್ಲಿ ಬಿಡಿಸಿದರು. ವಿಶ್ವನಾಥರಾಯನಿಗೆ ಗಣಿತಜ್ಞಾನವು ಅಷ್ಟರಮಟ್ಟಿಗೆ ಇದ್ದುದರಿಂದ ತಂದೆ ಹೇಳಿದುದನ್ನು ಸುಮ್ಮನೆ ಬರೆದಿಟ್ಟುಕೊಂಡನು. ಮರುದಿನ ಕ್ಲಾಸಿನಲ್ಲಿ ಪ್ರಿ. ಪರಾಂಜಪೆಯವರು ಅದನ್ನು ವಿವರಿಸಿ ಹೇಳಿದರು. ಆದರೆ ಅದನ್ನು ಬಿಡಿಸಲು ಅವರಿಗೆ ಹತ್ತು ಹನ್ನೆರಡು ಮೆಟ್ಟುಗಳು ಬೇಕಾದುವು. ಬಳಿಕ ವಿದ್ಯಾರ್ಥಿಗಳಿಗೆ ನೀವಾರಾದರೂ ಮಾಡಿ ಕೊಂಡು ಬಂದಿರುವಿರೊ? ಎಂದು ಕೇಳಲು ವಿಶ್ವನಾಥರಾಯನು ನೆಟ್ಟಗೆ ಕರೆ ಹಲಿಗೆಯ ಹತ್ತರ ಬಂದು ತಾನು ಬರೆದುಕೊಂಡುದನ್ನೇ ಮತ್ತೆ ಬರೆದಿಟ್ಟನು. ತಾವು ೧೦-೧೨ ಮೆಟ್ಟಿನಲ್ಲಿ ಬಿಡಿಸಿದ ಲೆಕ್ಕವು ಮೂರೇ ಹಾರಿಕೆಯಲ್ಲಿ ಅತಿ ಸುಲಭವಾಗಿ ಬಂದುದನ್ನು ನೋಡಿ ಪ್ರಿ. ಪರಾಂಜಪೆಯವರಿಗೆ ಆನಂದವಾಯಿತು. ಇದನ್ನು ನೀನೇ ಬಿಡಿಸಿರುವೆಯಷ್ಟೆ? ಎಂದು ಕೇಳಿದರು. ವಿಶ್ವನಾಥರಾಯನು ನಿಜ ಸಂಗತಿಯನ್ನು ಹೇಳಲು "ಸರಿ, ಟಿಳಕರ ಹೊರ್ತು ಬೇರೆಯವರಾರೂ ಇಷ್ಟು ಸುಲಭವಾಗಿ ಬಿಡಿಸಲಾರರು" ಎಂದು ನುಡಿದರು.

## ೧೦. ಗುಣೀ ಗುಣಿನಂ ವೇತ್ತಿ

ಲೋಕಮಾನ್ಯರಿಗೂ ಪ್ರಿನ್ಸಿಪಾಲ ಪರಾಂಜಪೆ ಪ್ರಭೃತಿಗಳಿಗೂ ಎಣ್ಣೆ-ಸೀಗೆಯಷ್ಟು ಗೆಳೆತನ. ಪ್ರಿ. ಪರಾಂಜಪೆಯವರು ಮರ್ಯಾದೆ ಮೀರಿ ಲೋಕಮಾನ್ಯರನ್ನು ನಿಂದಿಸುತ್ತಿದ್ದರು.

ಒಮ್ಮೆ ಒಬ್ಬ ಗೃಹಸ್ಥರು ಲೋಕಮಾನ್ಯರ ಓಲಗ ಶಾಲೆಯೊಳ ಗಿಂದ ಮಾತುಕಥೆಗಳನ್ನು ತೀರಿಸಿಕೊಂಡು ಮರಳುವಾಗ ಅಲ್ಲಿ ಅವರ

ಕಣ್ಣಿಗೆ ಪ್ರೊ. ಪರಾಂಜಪೆಯವರ ಛಾಯಾಚಿತ್ರದರ್ಶನವಾಯಿತು. ಅವರು ಕೂಡಲೆ ಸೋಜಿಗಗೊಂಡು ಅದನ್ನೇ ನೋಡುತ್ತ ಅಲ್ಲಿ ನಿಲ್ಲಲು ಲೋಕಮಾನ್ಯರು ಹತ್ತರ ಬಂದು ಏಕೆ ಆಶ್ಚರ್ಯ ಮುದ್ರೆಯಿಂದ ನೋಡುತ್ತಿರುವಿರಿ? ಎಂದು ಕೇಳಿದರು. ಆ ಗೃಹಸ್ಥನು-ತಮ್ಮ ಬಲವಾದ ವಿರೋಧಿಗಳಾದ ಈ ಪ್ರೊ. ಪರಾಂಜಪೆಯವರ ಫೋಟೋ ಇಲ್ಲೇಕೆ ಎಂದು ಕೇಳಿದನು. ಟಿಳಕರು ಆತನಿಗೆ "ನೀವು ಜನಗಳು ತಪ್ಪುವುದು ಇಲ್ಲಿಯೆ. ವಿರೋಧಿಯೆಂದು ಅವನ ಗುಣಗ್ರಹಣಕ್ಕೆ ಬಂದ ಅಡ್ಡಿಯೇನು? ನನ್ನ ಮತ್ತು ಅವರ ಮತಭೇದವಿರಬಹುದು. ಆದರೆ ಅವರ ಸೂಕ್ಷ್ಮ ಬುದ್ಧಿ, ಸ್ವಾರ್ಥತ್ಯಾಗವು ಸುಳ್ಳೇನು? ಗುಣಕ್ಕೆ ನಾವೆಂದೂ ಮಾತ್ಸರ್ಯ ಮಾಡಲಾಗದು.

ಇದೇ ಮೇರೆಗೆ ನಾ. ಗೋಖಲೆಯವರ ವಿಷಯಕ್ಕೂ ಲೋಕಮಾನ್ಯರ ಅಂತಃಕರಣದಲ್ಲಿ ಆದರ ಪ್ರೀತಿಗಳು ವಾಸವಾಗಿದ್ದುವು. ನಾ. ಗೋಖಲೆಯವರಿಗೂ ಟಿಳಕರಿಗೂ ಇದ್ದ ತೀವ್ರವಾದ ವಿರೋಧವು ಜಗತ್ಪ್ರಸಿದ್ಧವೆ ಇದೆ. ಆದರೂ ನಾ. ಗೋಖಲೆಯವರು ದೇಶಹಿತದ ಒಳ್ಳೆಯ ಕೆಲಸವನ್ನು ಮಾಡಿದಾಗೆಲ್ಲ ಅವರನ್ನು ನಿರ್ವಂಚನೆಯಿಂದ ತುಂಬಾ ಹೊಗಳಿ ಲೋಕಮಾನ್ಯರು ಪ್ರಶಂಸಿಸುತ್ತಿದ್ದರು. ಪಬ್ಲಿಕ ಸರ್ವಿಸ ಕಮಿಶನದ ಮುಂದೆ ವಿಲಾಯತಿಯಲ್ಲಿ ಬಹಳೇ ಚೆನ್ನಾಗಿ ಸಾಕ್ಷಿ ಹೇಳಿ ಬಂದುದಕ್ಕೆ ಪ್ರಚಂಡ ಸಭೆ ಕೂಡಿಸಿ ಲೋಕಮಾನ್ಯರು ನಾ. ಗೋಖಲೆಯವರಿಗೆ ಅಭೂತಪೂರ್ವ ಸನ್ಮಾನ ಮಾಡಿದ್ದನ್ನು ನೋಡಿ ಅನೇಕರಿಗೆ ಆಶ್ಚರ್ಯವೆನಿಸಿತು.

# ಲೋಕಮಾನ್ಯರ ಕೆಲವು ವಿಚಾರಗಳು

## ಅಹಿಂಸಾ ಧರ್ಮದ ದಿಗ್ವಿಜಯ

ಜೈನರ ತತ್ವಜ್ಞಾನವು ಇಂದು ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿ ಇಲ್ಲದಿದ್ದರೂ ಜೈನರ ಅಹಿಂಸಾದಿ ಆಚಾರ ವಿಚಾರಗಳ ಪರಿಣಾಮವು ವೈದಿಕ ಧರ್ಮದ ಮೇಲೆ ಸಂಪೂರ್ಣವಾಗಿ ಆಗಿದೆ. ಶಂಕರಾಚಾರ್ಯರು ಜೈನಮತದ ಖಂಡನೆಯನ್ನು ಮಾಡಿದ್ದರೂ ಜೈನರ ಆಚಾರದ ವರ್ಚಸ್ಸು ಬ್ರಾಹ್ಮಣ ಧರ್ಮದ ಮೇಲಿರುವುದನ್ನು ಒಪ್ಪಿಕೊಂಡೇ ತಮ್ಮ ಕೆಲಸವನ್ನು ಕೊನೆಗಾಣಿಸಿಕೊಳ್ಳಬೇಕಾಯಿತು. ಜೈನರು ವೇದಗಳನ್ನು ಪ್ರಮಾಣ ಗ್ರಂಥಗಳೆಂದು ತಿಳಿಯುವದಿಲ್ಲ. ಶ್ರೌತ ಧರ್ಮದೊಳಗಿನ ಹಿಂಸೆಯೆ ಇದಕ್ಕೆ ಮೂಲ ಕಾರಣವಿರಲಿಕ್ಕೆ ಬೇಕು; ವೈದಿಕ ಧರ್ಮ ಪರಂಪರೆಯ ಬಗ್ಗೆ ಅನಾಸ್ಥೆಯಿಲ್ಲ. ರಾಮಾಯಣ, ಮಹಾ ಭಾರತ, ಪುರಾಣಾದಿಗಳೊಳಗಿನ ಕಥೆಗಳೂ, ದೇವತೆಗಳೂ ಯೋಗಶಾಸ್ತ್ರದೊಳಗಿನ ತತ್ವಗಳೂ ನಮ್ಮಂತೆ ಜೈನರಿಗೂ ಮಾನ್ಯವಿರುತ್ತವೆ. ಅಷ್ಟೇಕೆ ಜೈನಧರ್ಮಿಗಳೂ ಆರ್ಯ ಬಾಂಧವರೇ ಆಗಿದ್ದಾರೆ. ಪರದೇಶಗಳಿಂದ ಬಂದವರಲ್ಲ. ಒಂದಾನೊಂದು ಸಮಯದಲ್ಲಿ ಜೈನ ಧರ್ಮಿಗಳು ವೈದಿಕ ಧರ್ಮವನ್ನೂ, ವೈದಿಕ ಧರ್ಮಿಗಳು ಜೈನಧರ್ಮವನ್ನೂ ಸ್ವೇಚ್ಛೆಯಿಂದ ಬೇಕಾದಾಗ ಸ್ವೀಕರಿಸುತ್ತಿದ್ದರು. (ಕರ್ನಾಟಕದಲ್ಲಿ ಕದಂಬರು, ಚಲುಕ್ಯರು, ಹೊಯ್ಸಳರ ಕಾಲಕ್ಕೆ ಆದ ಇಂಥ ಅನೇಕಾನೇಕ ಉದಾಹರಣಗಳು ಇತಿಹಾಸದಲ್ಲಿ ಸಿಕ್ಕುತ್ತವೆ. – ಲೇಖಕ) ಈ ಪದ್ಧತಿಯು ಇಂದಿಗೂ ಅಲ್ಪ ಸ್ವಲ್ಪ ಉಳಿದಿದೆ. ಕೆಲವು ಜೈನರು ವೈಷ್ಣವರಾದುದನ್ನೂ, ಕೆಲ ವೈಷ್ಣವರು ಜೈನರಾದುದನ್ನೂ ಮೊನ್ನೆ ತಾನೆ ಕೇಳಿದ್ದೇವೆ. ಆದುದರಿಂದ ಇವೆರಡು ಧರ್ಮಗಳೊಳಗಿನ ಭೇದವು ರಾಷ್ಟ್ರೀಯ ದೃಷ್ಟಿಯಿಂದ ತೀರ ಗೌಣವಾಗಿದೆ.

ಇವೆರಡೂ ಧರ್ಮಗಳು ಒಂದೇ ಶರೀರದ ಎರಡು ಕೈಗಳಂತಿವೆ. **ಜಗತ್ತಿನ ಎಲ್ಲರಾಷ್ಟ್ರಗಳಲ್ಲಿಯೂ ಇವೆರಡೂ ಧರ್ಮಗಳಿಗೆ ಸಮ್ಮತವಾಗಿರುವ ಅಹಿಂಸಾದಿ ತತ್ವಗಳ ಪ್ರಸಾರ ಮಾಡುವ ಕಾರ್ಯವನ್ನು ಇವರಿಬ್ಬರೂ ಒಮ್ಮನಸಿನಿಂದ ಕೈಕೊಂಡರೆ ಅಹಿಂಸಾಧರ್ಮದ ಧ್ವಜಪತಾಕೆಯು ದಿಗ್ದೇಶಗಳಲ್ಲೆಲ್ಲ ಮೆರೆಯುಲಿಕ್ಕೆ ಅದಾವ ಆತಂಕವೂ ಉಂಟಾಗಲಿಕ್ಕಿಲ್ಲ.** ಒಂದು ಕಾಲಕ್ಕೆ ಹಿಂದುಸ್ಥಾನದಲ್ಲಿ ಇವೆರಡು ಧರ್ಮಗಳಲ್ಲಿ ಸ್ವಲ್ಪ ವಿರೋಧವಿತ್ತು. ಆದರೆ ಆ ವಿರೋಧದಿಂದ ಆಗಬೇಕಾಗಿದ್ದ ಇಷ್ಟಪರಿಣಾಮವು ಆಗಿ ಬಿಟ್ಟಿದೆ; ಈಗ ವೈದಿಕ ಧರ್ಮಿಗಳು ಆಚಾರದಿಂದ ಜೈನ ಧರ್ಮಿಗಳಾಗಿದ್ದಾರೆ; ಜೈನ ಧರ್ಮಿಗಳು ತತ್ವಜ್ಞಾನದಿಂದ ವೈದಿಕ ಧರ್ಮಿಗಳಾಗಿದ್ದಾರೆ. ಆದಕಾರಣ ಈ ನಿಜ ಸ್ಥಿತಿಯನ್ನು ಮನಗಂಡು ಇಬ್ಬರೂ ತಮ್ಮ ತಮ್ಮ ಏಳ್ಗೆಗಾಗಿ ಸೊಂಟಕಟ್ಟಿದರೆ ಅದು ಕೈಗೂಡಲಿಕ್ಕೇ ಬೇಕೆಂಬಲ್ಲಿ ಸಂದೇಹವಿಲ್ಲ.

( ಕೇಸರಿ ೧೩-೧೨-೧೯೦೪ )

## ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವು ಬೇಕು

"ಧರ್ಮಶಿಕ್ಷಣವಿಲ್ಲದ್ದರಿಂದ ಸಮಾಜದ ಮೇಲೆ ಅದಾವ ಬಗೆಯ ಪರಿಣಾಮಗಳುಂಟಾಗಿರುವವು ಹಾಗೂ ಬ್ರಿಟಿಶರ ಆಡಳಿತದಲ್ಲಿ ಅದಾವ ಬಗೆಯ ಹೊಸ ಪೀಳಿಗೆಯುಂಟಾಗಿದೆ ಎಂಬುದನ್ನು ಬಿಚ್ಚಿ ಹೇಳುವ ಅವಶ್ಯಕತೆಯಿಲ್ಲ. ಪರಕೀಯ ಸರಕಾರವಿರುವುದರಿಂದಲೂ ಮೇಲಾಗಿ ಪರಧರ್ಮೀಯ ಸರಕಾರವೂ ಆಗಿರುವುದರಿಂದಲೂ ಧಾರ್ಮಿಕ ಶಿಕ್ಷಣಕ್ಕೆ ಅನುಕೂಲತೆಗಳನ್ನು ಅದು ಕಲ್ಪಿಸಿ ಕೊಡಲಾರದು; ಇದನ್ನು ನಾವೇ ಮಾಡಲಿಕ್ಕೆಬೇಕು. ಧಾರ್ಮಿಕ ಶಿಕ್ಷಣದ ಎರಡು ಅಂಗಗಳಿವೆ. ಬುದ್ಧಿಗ್ರಾಹ್ಯ ಶಿಕ್ಷಣವು ಅದರ ಒಂದಂಗವಾಗಿದೆ. ಆದರೆ ಇಷ್ಟರಿಂದಲೆ ಬಗೆಹರಿಯಲಾರದು. ಯಾವ

ಧರ್ಮ-ಶಿಕ್ಷಣದಿಂದ ಮನುಷ್ಯನು ಸ್ವಾಭಿಮಾನಿಯೂ ಶ್ರದ್ಧಾವಂತನೂ, ಕರ್ತವ್ಯದಕ್ಷನೂ, ಸತ್ಯನಿಷ್ಠನೂ ಆಗುವನೋ ಅದುವೆ ನಿಜವಾದ ಧರ್ಮ-ಶಿಕ್ಷಣವು; ಮತ್ತು ವಿದ್ಯಾರ್ಥಿಗಳಿಗೆ ಅತ್ಯಂತ ಅವಶ್ಯಕವಾಗಿರುವುದು ಈ ಬಗೆಯ ಶಿಕ್ಷಣವು. ಕೇವಲ ತಾತ್ವಿಕ, ಔಪಪತ್ತಿಕ ವಿಚಾರಗಳನ್ನು ಅವರು ದೊಡ್ಡವರಾದ ಬಳಿಕ ತಾವೇ ಆಳವಾಗಿ ಓದಿಕೊಳ್ಳಬಹುದು. ಚಿಕ್ಕಂದಿನಲ್ಲಿ ಕೋಮಲವಾದ ಅಂತಃಕರಣದಲ್ಲಿ ಸದಾಚಾರ, ಸ್ವಾಭಿಮಾನ ಮತ್ತು ಸ್ವಧರ್ಮ ನಿಷ್ಠೆಗಳ ಬೀಜಾರೋಪಣವು ಆದರೇನೇ ಮುಂದೆ ಮನುಷ್ಯನ ನಡೆನುಡಿಗಳಲ್ಲಿ ಅದರ ಸುಪರಿಣಾಮಗಳು ಕಂಡುಬರುವವು. ಆದುದರಿಂದಲೇ ಶಾಲೆಗಳಲ್ಲಿ, ಅವಶ್ಯಕವಾದ ಧರ್ಮಶಿಕ್ಷಣವು ಬೇಕೇಬೇಕು. ಧಾರ್ಮಿಕ ಶಿಕ್ಷಣವನ್ನು ಕೊಡುವ ಅನೇಕ ಬಗೆಗಳಿದ್ದರೂ ಅವೆಲ್ಲವುಗಳಲ್ಲಿ ಶಿಕ್ಷಕರ ಆಚರಣದ ಆದರ್ಶವು ಸರ್ವೋತ್ಕೃಷ್ಟವಾಗಿದೆ.

( ಲೋ. ಟಿ. ಗೇ. ಅ. )

## ಮೂರ್ತಿ ಪೂಜೆ

ಪ್ರಾಚೀನ ಕಾಲದಲ್ಲಿ ಇಂದ್ರ, ಸೂರ್ಯ, ವಾಯು, ಅಗ್ನಿ ಮೇಘ ಮೊದಲಾದವುಗಳ ಆರಾಧನೆಯು ನಡೆಯುತ್ತಿತ್ತು; ಮುಂದೆ ಸರ್ವಶಕ್ತಿಮಂತನಾದ ಪರಮೇಶ್ವರನು ಒಬ್ಬನೇ ಇದ್ದು ಆತನ ಅಂಶ ರೂಪಗಳೇ ಅಗ್ನಿ, ವಾಯು ಮೊದಲಾದವುಗಳೆಂಬ ಕಲ್ಪನೆಯು ತಲೆದೋರಿತು. ಬರಬರುತ್ತ ಈ ದೇವತೆಗಳ ಗುಡಿಗಳು ಅಸ್ತಿತ್ವದಲ್ಲಿ ಬಂದವು. ಅಗಸ್ತ್ಯಋಷಿಯ ಆಶ್ರಮದಲ್ಲಿ ಶ್ರೀರಾಮಚಂದ್ರನು ಹೋದಾಗ ಅಲ್ಲಿ ಅಗ್ನಿ ಮೊದಲಾದ ದೇವತೆಗಳ ಸ್ಥಾನಗಳನ್ನು ಕಂಡ ಉಲ್ಲೇಖವಿದೆ. ಇದರಿಂದ ರಾಮಾಯಣ ಕಾಲದಲ್ಲಿ ದೇವಾಯತನಗಳಿದ್ದುವೆಂದು ಸಿದ್ಧವಾಗುತ್ತದೆ. ಮನುಸ್ಮೃತಿಯಲ್ಲಿಯೂ ದೇವಾಲಯಗಳ ವಿಚಾರವು ಬಂದಿದೆ. ಇತರ ರಾಷ್ಟ್ರಗಳಲ್ಲಿಯೂ ಮೂರ್ತಿ ಪೂಜೆಯು ಅತಿ ಪ್ರಾಚೀನ ಕಾಲದಿಂದ ನಡೆದುಬಂದುದಿದೆ. ಇಜಿಪ್ತಿ

ಸಲ್ಲಿ ೫ ಸಾವಿರ ವರ್ಷಗಳ ಮೊದಲು ಕಟ್ಟಲ್ಪಟ್ಟ ಸೂರ್ಯನ ದೇವಾಲಯವಿದೆ. ಮುಹಮ್ಮದ ಮತ್ತು ಕ್ರಿಸ್ತನ ಅನುಯಾಯಿಗಳು ಮೂರ್ತಿ ಪೂಜಕರಲ್ಲ, ಆದರೆ ಒಂದು ದೃಷ್ಟಿಯಿಂದ ಅವರೂ ಮೂರ್ತಿ ಪೂಜಕರೇ ಆಗಿದ್ದಾರೆ. ವೇದಕಾಲದಲ್ಲಿ ಅಖಿಲ ವಿಶ್ವವೆಲ್ಲವೂ ಪರಮಾತ್ಮನ ಬಾಹ್ಯಶರೀರವೆಂಬ ಕಲ್ಪನೆಯಿತ್ತು; ಮತ್ತು ಅದರ ಆರಾಧನೆಯೆಂದರೇನೆ ಮೂರ್ತಿಪೂಜೆಯು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸಿದ ಉಲ್ಲೇಖವಿದೆ. ಅದರಂತೆ ಪುರುಷಸೂಕ್ತ ಮತ್ತು ಅರಣ್ಯಾಗಳಲ್ಲಿಯೂ ಇದೆ. ಮೂರ್ತಿ ಪೂಜೆಗೆ 'ಪ್ರತೀಕ'ವೆಂದು ಉಪನಿಷತ್ತುಗಳಲ್ಲಿ ಹೇಳಿದೆ. ಪ್ರತೀಕವೆಂದರೆ ಪ್ರತಿನಿಧಿ. ಎಲ್ಲ ವಿಶ್ವವನ್ನು ಕಣ್ಣೆದುರಿಟ್ಟುಕೊಳ್ಳುವುದು ಅಸಾಧ್ಯವಾಗಿರುವುದರಿಂದ ಅದರ ಒಂದಂಶವನ್ನು ಮುಂದಿರಿಸಿಕೊಳುವುದು ಈ ತೆರನಾಗಿ ಮೂರ್ತಿ ಪೂಜೆಯ ಕಲ್ಪನೆಯು ತಲೆದೋರಿತು. ವೈಸರಾಯನೆಂದರೆ ಬಾದಶಹನಲ್ಲ, ಆವನ ಪ್ರತಿನಿಧಿಯು ಹೇಗೊ ಹಾಗೆಯೆ ಸರ್ವವ್ಯಾಪಿಯಾದ ಪರಮಾತ್ಮನ ಪ್ರತಿನಿಧಿಯೆ ಮೂರ್ತಿಯು. ಮೂರ್ತಿ ಪೂಜೆಯಲ್ಲಿ ಹಲಕೆಲವು ಸಾಂಕೇತಿಕ ಚಿಹ್ನಗಳೂ ಇವೆ. ಈಸ್ಟ ಇಂಡಿಯಾ ಕಂಪನಿಯ ಹಳೆಯ ಬಿಲ್ಲಿಯ ಮೇಲಿನ ತಕ್ಕಡಿಯು ಅದರ ಸಂಕೇತವಿರುವಂತೆ ಶ್ರೀ ವಿಷ್ಣುದೇವರ ಕೈಯಲ್ಲಿ ಚಕ್ರವಿದೆ. ಪರಮಾತ್ಮನ ಕೈಯಲ್ಲಿ ಅವ್ಯಾಹತವಾಗಿ ತಿರುಗುತ್ತಿರುವ ಕಾಲ ಚಕ್ರದ ಸೂಚಕವಾಗಿದೆ ಅದು. ಮೂರ್ತಿಯು ಪರಮಾತ್ಮನ ಚಿತ್ರವು ಅಥವಾ ಪ್ರತಿನಿಧಿಯಾಗಿದೆ ಎಂದು ಮನವರಿಕೆಯಾದ ಬಳಿಕ ಮೂರ್ತಿ ಪೂಜೆಯನ್ನು ಮಾಡುವುದರಲ್ಲಿ ಪಾತಕವಿಲ್ಲ. ಮೂರ್ತಿ ಪೂಜೆಯನ್ನು ಹಲವು ಬಗೆಗಳಿಂದ ಮಾಡಬಹುದು. ದೇವದೇವನ ಸ್ತುತಿಸ್ತೋತ್ರಗಳನ್ನಷ್ಟು ಹೇಳಿದರೆ ಸಾಕು; ಅವನಿಗೆ ನೈವೇದ್ಯಾದಿ ಉಪಚಾರಗಳೇತಕ್ಕೆ? ಎಂದು ಕೆಲವರ ಆಕ್ಷೇಪ. ಹಾಗಾದರೆ ಆ ದೇವನಿಗೆ ಸ್ತುತಿಯಾದರೂ ಏತಕ್ಕೆ ಬೇಕೆಂದು ನನ್ನ ಪ್ರಶ್ನೆ. ಸ್ತುತಿಯಂತೆ ಇನ್ನುಳಿದ ಅನೇಕ ಉಪಚಾರಗಳನ್ನೂ ಮಾಡುವುದುಂಟು. ಇಂತಹ

ಅನೇಕ ಉಪಚಾರಗಳಲ್ಲಿ ಮನಸು ತೊಡಗಿ ಅಂತಃಕರಣವು ಉಲ್ಲಸಿತ ವಾಗಿ ಭಕ್ತಿಯು ಹೆಚ್ಚುವುದು. ಒಮ್ಮೆ ಮೂರ್ತಿಯ ಕಲ್ಪನೆಯು ಬೇರು ಹಿಡಿದಬಳಿಕ ಉಪಾಸಕರ ರುಚಿಭೇದದಂತೆ ಬಗೆಬಗೆಯ ದೈವತಗಳು ರೂಢಿಯಲ್ಲಿ ಬಂದುವು. ಮೂರ್ತಿಗಳು ಮುಖ್ಯವಾಗಿ ಮೂರು ಪ್ರಕಾರದವು: (೧) ಅವತಾರಿಕ ಪುರುಷರ ಪ್ರತಿಮೆಗಳು (೨) ಸೂರ್ಯ, ಚಂದ್ರ, ಬೃಹಸ್ಪತಿ ಮೊದಲಾದವರ ಪ್ರತಿಮೆಗಳು (೩) ಸಾಂಕೇತಿಕ ಚಿಹ್ನಗಳು ( Symbols ). ಗಣಪತಿಯ ಮೂರ್ತಿಯು ಸಾಂಕೇತಿಕ ವರ್ಗದೊಳಗಿನದು. ಮುದ್ಗಲ ಪುರಾಣ ದಲ್ಲಿ ಗಣಪ್ಪನಿಗೆ ಆನೆಯ ಸೊಂಡೆಯೇಕೆ ಬಂದಿತೆಂದು ಹೇಳಿದೆ. ಆದರೆ ನಾನು ಆ ದೃಷ್ಟಿಯಿಂದ ನೋಡದೆ ತಾತ್ವಿಕ ದೃಷ್ಟಿಯಿಂದ ವಿಚಾರಿ ಸುತ್ತೇನೆ. ಗಣಪ್ಪನ ಸೊಂಡಿಯು ವಿದ್ಯೆಯ ಸೂಚಕವಾಗಿದೆ. ವಿದ್ಯೆಯ ಅಧ್ಯಕ್ಷ ಓಂ ಕಾರವು. ಅದನ್ನು ಮೂರ್ತೀಕರಿಸ ಬೇಕಾಗಿದ್ದರೆ ಸೊಂಡಿಲಿನ ರೂಪದಿಂದಲೆ ಅದನ್ನು ತೋರಿಸುವುದು ಅಗತ್ಯವಿದೆ. "ಸರ್ವೇಷು ಗಾತ್ರೇಷು ಶಿರಃ ಪ್ರಧಾನಮ್." ಆದುದರಿಂದಲೆ ಓಂಕಾರವನ್ನು ಅಲ್ಲಿ ಇಟ್ಟಿದ್ದಾಗಿದೆ. ಜ್ಞಾನವೆ ಶಕ್ತಿ. ಇಂಗ್ಲಿಷಿನಲ್ಲಿ "Knowledge is Power" ಎಂದು ಗಾದೆಯಿದೆ. ಇದರ ನಿದರ್ಶಕವೆಂದರೆ ಗಣೇಶ ಮೂರ್ತಿಯು. ಜ್ಞಾನವಿದ್ದಲ್ಲಿ ಋದ್ಧಿ ಸಿದ್ಧಿಗಳಿವೆ. ಇದರ ಸೂಚಕವೆಂದೇ ಗಣೇಶನ ಇಕ್ಕೆಲದಲ್ಲಿ ಎರಡು ಹೆಣ್ಣು ಮೂರ್ತಿಗಳು. ವೇದಗಳಲ್ಲಿ ಪರಮಾತ್ಮನ ಸೂಚ ಕವೆಂದು ಓಂಕಾರವು ಹೇಳಲ್ಪಟ್ಟಿದೆ. ಇಲಿಯು ವಿಘ್ನ ಸೂಚಕವಾಗಿದೆ. ಅಂಕುಶ, ಪರಶುಗಳಾದರೂ ಇದೇ ಮೇರೆಗೆ ಸಾಂಕೇತಿಕ ಚಿಹ್ನಗ ಳಾಗಿವೆ. ಇನ್ನು ಚತುರ್ಥಿಯ ದಿನದಲ್ಲಿಯೇ ಗಣಪ್ಪನ ಪೂಜೆ ಏಕೆ? ಜಾಗೃತಿ, ಸ್ವಪ್ನ ಅಥವಾ ಸುಷುಪ್ತ್ಯಾವಸ್ಥೆಯಲ್ಲಿ ಪೂಜೆಯನ್ನು ಮಾಡುವುದಕ್ಕಿಂತ ಚತುರ್ಥಾವಸ್ಥೆಯಲ್ಲಿ ಅಂದರೆ ತುರ್ಯ ಸ್ಥಿತಿಯಲ್ಲಿ ಪೂಜಿಸುವುದು ಉತ್ತಮವೆಂದು ಚತುರ್ಥಿಯ ದಿನ ಗಣೇಶ ಪೂಜೆ ಯನ್ನು ಮಾಡುವ ಸಾಂಪ್ರದಾಯವುಂಟಾಗಿರಬೇಕು. ಅಂದು

ಚಂದ್ರನನ್ನು ನೋಡಬಾರದೆಂಬ ರೂಢಿಯೇಕೆ ಉಂಟಾಗಿರಬಹುದು ? ಮನಸು ಚಂಚಲ ಸ್ವಭಾವವುಳ್ಳದು; 'ಚಂದ್ರಮಾ ಮನಸೋ ಜಾತಃ' ಇತ್ಯಾದಿ ವಚನಗಳಿಂದ ಚಂದ್ರನು ಪರಮಾತ್ಮನ ಮನಸು; ಆದಕಾರಣ ಚಂಚಲ ಸ್ವಭಾವದ ಮನಸ್ಸಿನ ಕಡೆಗೆ ಗಮನಿಸದೆ ಪರಮಾತ್ಮನ ವಿಶ್ವರೂಪವನ್ನೇ ನಿರೀಕ್ಷಿಸಬೇಕು, ಧ್ಯಾನಿಸಬೇಕು. ಎಂಬ ಉದ್ದೇಶವೇ ಇದರಲ್ಲಿರಬೇಕೆಂದು ಗೊತ್ತಾಗುತ್ತದೆ.

( ಕೇಸರಿ ೮-೯-೧೯೦೩ )

## 'ಸ್ವದೇಶಿ,' ಮತ್ತು 'ಬಹಿಷ್ಕಾರ' ಚಳವಳಿ

ಇದನ್ನು ಕುರಿತು ಲೋಕಮಾನ್ಯರ ವಿಚಾರಗಳು ಎಷ್ಟು ಓಜಸ್ವಿಯಾಗಿದ್ದುವೆಂಬುದು ಕೆಳಗಿನ ಉಲ್ಲೇಖಗಳಿಂದ ಕಂಡು ಬರುವಂತಿದೆ.

ಹಿಂದುಸ್ತಾನದಲ್ಲಿ ಇಂಗ್ಲಿಷ ಅಧಿಕಾರಿಗಳಿಗೆ ತಮ್ಮ ರಾಜ್ಯವು ಹೋದೀತೆಂಬ ಹೆದರಿಕೆಯೆ ಇಲ್ಲದಾಗಿದೆ; ಆದಕಾರಣ ಆಳರಸರು ನಮ್ಮ ಬಿನ್ನಹ, ಬೇಡಿಕೆಗಳಿಗೆ ಎಳ್ಳಷ್ಟೂ ಬೆಲೆಯನ್ನು ಕೊಡುವದಿಲ್ಲ; ಇಷ್ಟು ಹೆಮ್ಮೆ ಬಂದು ಬಿಟ್ಟಿದೆ ಅವರಿಗೆ. ಇವರನ್ನು ಚೆನ್ನಾಗಿ ಎಚ್ಚರಿಸಲಿಕ್ಕೆ ನಮ್ಮ ಹತ್ತರ ಒಂದೇ ಸಾಧನವಿದೆ; ಅದುವೆ ಬಹಿಷ್ಕಾರ. ನಾವು ಸದ್ಯಸ್ಥಿತಿಯಲ್ಲಿ ಎಲ್ಲ ವಿದೇಶಿ ವಸ್ತುಗಳನ್ನೂ ಬಹಿಷ್ಕರಿಸುವುದು ಕಷ್ಟ. ಆದರೂ ಅತ್ಯಂತ ಅವಶ್ಯಕವೇ ಆಗಿರುವ ವಿದೇಶೀಯ ವಸ್ತುಗಳನ್ನು ಕೊಳ್ಳುವಾಗ ಒಂದು ಮಾತನ್ನಾದರೂ ನೆನಪಿಡುವುದು ಕರ್ತವ್ಯವಾಗಿದೆ. ವಿದೇಶೀಯ ವಸ್ತುಗಳನ್ನು ಉಪಯೋಗಿಸದೆ ಗತ್ಯಂತರವೇ ಇಲ್ಲದಿದ್ದರೆ ನಾವು ಕೊಳ್ಳಬೇಕೆಂದಿರುವ ವಸ್ತುಗಳನ್ನು ನಮ್ಮನ್ನು ಹಿಂಡಿ ಹಿಸುಕಿ ಸಿಪ್ಪೆ ಮಾಡುತ್ತಿರುವ ರಾಜ್ಯಕರ್ತರ ದೇಶದೊಳಗಿಂದಾದರೂ ಕೊಳ್ಳಬಾರದೆಂಬ ನಿಶ್ಚಯವನ್ನಾದರೂ ಮಾಡುವುದು ಅಗತ್ಯವಾಗಿದೆ.

ಇಂಗ್ಲಿಷರು ನಮ್ಮ ದೇಶವನ್ನು ಕೈವಶಪಡಿಸಿಕೊಂಡಿರುವರು. ( ಇದು ಎಷ್ಟು ದಿನ ಸಾಗುವದೋ ಸಾಗಲಿ; ) ಅವರ ವಿರುದ್ಧ ಶಸ್ತ್ರವನ್ನೆತ್ತುವ ಶಕ್ತಿಯು ನಮ್ಮಲ್ಲಿಲ್ಲ; ಆ ಇಚ್ಛೆಯೂ ಉಂಟಾಗಿಲ್ಲ;

ಆದರೆ ನಾವು ಇಂಗ್ಲೆಂಡಿನ ಸಾಮಾನು ಕೊಂಡು ಕೋಟ್ಯಾವಧಿ ರೂಪಾಯಿಗಳನ್ನು ಪ್ರತಿವರ್ಷ ಅಲ್ಲಿಯ ವರ್ತಕರಿಗೂ ಕೂಲಿಕಾರ ರಿಗೂ ಸುರಿಸುತ್ತಿದ್ದೇವೆ. ಈ ಹೊನ್ನಿನ ಹೊಳೆಯನ್ನಾದರೂ ನಾವು ಆಣೆಕಟ್ಟು ಹಾಕಿ ತಡೆದು ಹಿಡಿಯಬಾರದೆ? ಯಾವ ಆಳರಸರು ನಮ್ಮ ಬಿನ್ನಹಗಳನ್ನು ಮನ್ನಿಸುವದಿಲ್ಲವೊ, ನಮ್ಮ ದುಃಖಗಳನ್ನು ಕಣ್ಣೆತ್ತಿ ನೋಡುವದಿಲ್ಲವೊ ಅವರ ನಾಡಿನ ಸರಕು ಕೊಂಡು ಅವರಿಗೆ ನೆರ ವಾಗುವುದು ಅದಾವ ಜಾಣತನ? ಈ ಬಹಿಷ್ಕಾರಾಸ್ತ್ರದ ಪ್ರಯೋಗ ದಿಂದಲೆ ಚೀನ ದೇಶವು ಅಮೇರಿಕೆಯವರಿಗೆ ಒಳ್ಳೆ ಬುದ್ಧಿ ಕಲಿಸಿ ಹಾದಿಗೆ ತಂದ ಪ್ರತ್ಯಕ್ಷ ಉದಾಹರಣವು ನಮ್ಮ ಕಣ್ಣೆದುರಿಗಿದೆ. ಶಸ್ತ್ರವಿಹೀ ನರೂ ದುರ್ಬಲರೂ ಆದ ಪ್ರಜೆಗಳೇ ಒಕ್ಕಟ್ಟಾಗಿ ಒಮ್ಮನಸ್ಸಿ ನಿಂದ ಧೈರ್ಯದಿಂದ ಎದ್ದು ನಿಂತರೆ ಬಲುಮೆಯ ರಾಜ್ಯಕರ್ತೃಗಳ ಕಣ್ಣಿನ ಮಬ್ಬು ಇಳಿಯಲು ತಡವಾಗುವುದಿಲ್ಲ. ರಾಷ್ಟ್ರದ ಇತಿ ಹಾಸದಲ್ಲಿ ಈಗಿನಂತಹ ಪ್ರಸಂಗಗಳು ಬರುವುದು ಅಪರೂಪ. ಆದ ಕಾರಣ ಇಂತಹ ಸಂದರ್ಭಗಳು ಯಾವಾಗ ಉಂಟಾಗುವವೊ ಆಗಲೆ ಹೊತ್ತು ಸಾಧಿಸಿಕೊಳ್ಳಲಿಕ್ಕೆಬೇಕು. ಗಾಳಿ ಬಿಟ್ಟಾಗ ತೂರಿಕೊಳ್ಳದೆ ಬಿಟ್ಟರೆ ನಮ್ಮಂತಹ ತಿಳಿಗೇಡಿಗಳು ನಾವೇ; ನಮ್ಮಂತಹ ಆಲಸಿಗರೂ ನಾವೇ; ನಮ್ಮಂತಹ ಕರ್ತವ್ಯಪರಾಙ್ಮುಖ ಹೇಡಿಗಳೂ ನಾವೇ.

## ವಿದ್ಯಾರ್ಥಿಗಳೂ ಸಾರ್ವಜನಿಕ ಚಳವಳಿಗಳೂ

ತರುಣರು ವಿದ್ಯಾರ್ಥಿಗಳಿದ್ದಾಗ ಅಭ್ಯಾಸಕ್ಕೇ ಮುಖ್ಯ ಲಕ್ಷ್ಯ ವನ್ನು ಕೊಡಬೇಕೆಂದು ನನ್ನ ಅಭಿಪ್ರಾಯವೂ ಇದೆ. ಆದರೆ ವಿದ್ಯಾರ್ಥಿ ಯಾಗಿರುವಾಗಲೆ ಕಲಿಯಬೇಕಾಗಿರುವ ಮಹತ್ವದ ವಿಷಯಗಳಲ್ಲಿ ಧಾರ್ಮಿಕ, ರಾಜಕೀಯ, ಸಾಮಾಜಿಕ ಮೊದಲಾದ ವಿಷಯಗಳೂ ಸಮಾವಿಷ್ಟವಾಗುತ್ತವೆ. ಈ ವಿಷಯಗಳ ಜ್ಞಾನವು ಈಗಿನ ಶಾಲೆ ಕಾಲೇಜಿನಲ್ಲಿ ದೊರೆಯುವದಿಲ್ಲ. ಈ ಶಿಕ್ಷಣಸಂಸ್ಥೆಗಳೊಳಗಿನ ಶಿಕ್ಷಕರು ಅಂತರಂಗದಲ್ಲಿ ಸಾರ್ವಜನಿಕ ಚಳವಳಿಗಳ ಬಗ್ಗೆ ಸಹಾನುಭೂತಿ

ಯೆನ್ನೂ ತೋರಿಸುತ್ತಿರಬಹುದು. ಆದರೆ ಅದರ ಉಪಯೋಗವೇನು? ಮನೆಯೊಳಗಾಡುವುದನ್ನು ಬೈಲಿಗೆ ಬಂದು ಹೇಳುವುದಕ್ಕೆ ಪರತಂತ್ರ ರಾದ ಅಧ್ಯಾಪಕರಿಗೆ ಸ್ವಾತಂತ್ರ್ಯವಿಲ್ಲ. ರಾಷ್ಟ್ರೀಯ ಸಭೆ, ಸಾಮಾಜಿಕ ಪರಿಷತ್ತು, ಔದ್ಯೋಗಿಕ ಪರಿಷತ್ತು, ಪ್ರದರ್ಶನಗಳು, ಶಿವಾಜಿ ಉತ್ಸವ, ಸ್ವದೇಶಿ ಚಳವಳಿ ಮೊದಲಾದ ರಾಷ್ಟ್ರೀಯ ಮಹೋತ್ಸವಗಳಲ್ಲಿ ವಿದ್ಯಾರ್ಥಿಗಳು ಶಕ್ಯವಿದ್ದಷ್ಟು ಮನಮುಟ್ಟಿ ಕೆಲಸ ಮಾಡಿದರಲ್ಲವೆ ಅವರಿಗೆ ಸಾರ್ವಜನಿಕ ಚಳವಳಿಯ ಶಿಕ್ಷಣವು ಸಿಕ್ಕುವುದು? ಇಲ್ಲದಿದ್ದರೆ ಇದರ ಅನುಭವ, ಅಭಿರುಚಿಗಳುಂಟಾಗುವ ಬಗೆಯಾದರೂ ಹೇಗೆ? ಕಲಿಯುವಾಗ ಸಾರ್ವಜನಿಕ ಚಳವಳಿಯಲ್ಲಿ ಸೇರುವಂತಿಲ್ಲ; ಕಲಿಯುವುದು ಮುಗಿದಕೂಡಲೆ ಸರಕಾರಿ ಕಚೇರಿ ಕಟ್ಟೆಗಳಲ್ಲಿ ಆಳಾಗಿ ದುಡಿಯದೆ ನಡೆಯುವಂತಿಲ್ಲ! ಚಿಕ್ಕವನಿದ್ದಾಗ ವಿದ್ಯಾರ್ಥಿ; ಹರೆದವನಾದಾಗ ನೌಕರ; ಇಳಿವಯಸ್ಸಿಗೆ ಪೆನ್ಶನ್‌ದಾರ! ಆದಕಾರಣ ವಿದ್ಯಾರ್ಥಿಗಳಿಗೆ ಸಾರ್ವಜನಿಕ ಅಂದೋಲನದಲ್ಲಿ ಸೇರಗೊಡದಿರುವುದು ರಾಷ್ಟ್ರದ ಹಾನಿ, ರಾಷ್ಟ್ರೀಯ ಘಾತನೆಂದೇ ನಮ್ಮ ನಿಶ್ಚಿತವಾದ ಅಭಿಪ್ರಾಯ. ವಿದ್ಯಾರ್ಥಿಗಳು ತಮ್ಮ ಎಲ್ಲ ಕಾಲವನ್ನೂ ಇದರಲ್ಲಿಯೆ ಕಳೆಯಬೇಕೆಂದು ನಮ್ಮ ಅಭಿಪ್ರಾಯವಲ್ಲ. ಜ್ಞಾನಸಂಪಾದನೆಯು ವಿದ್ಯಾರ್ಥಿಯ ಆದ್ಯ ಕರ್ತವ್ಯವಾಗಿದೆ. ಆದುದರಿಂದ ರಾಷ್ಟ್ರೀಯ ಚಳವಳಿಯ ಪರಿಚಯವನ್ನು ಮಾಡಿಕೊಳ್ಳುವುದೂ ಅವರ ಅವಶ್ಯಕ ಕಾರ್ಯವು. ರಾಷ್ಟ್ರೀಯ ಚಳವಳಿಗಳಲ್ಲಿ ಸೇರಿ, ಅವುಗಳನ್ನು ನಿರೀಕ್ಷಿಸಿ ಅದರಿಂದಾಗುವ ದೇಶದ ಹಿತಾಹಿತಗಳನ್ನು ಸರಿಯಾಗಿ ಅರಿತುಕೊಳ್ಳುವುದು ವಿದ್ಯಾರ್ಥಿಯಾಗಿದ್ದಾಗಲೆ ಸಾಧ್ಯವು. ಈ ಮಹತ್ವದ ಕಾರ್ಯಕ್ಕೆ ಯಾವ ಅಧ್ಯಾಪಕರು ವಿರೋಧಿಸುವರೊ ಅವರು 'ಗುರು'ಗಳೇ ಅಲ್ಲ; (ಹಿತ) ಶತ್ರುಗಳು. ಇಂತಹರು ಗುರುಗಳಾಗಿರದೆ ಹೊಟ್ಟೆಯ ಪಾಡಿಗಾಗಿ ದುಡಿಯುವ ತೊತ್ತುಗಳೇ ಸರಿ.

ಕೇಸರಿ ೭-೧೧-೦೫